ಪ್ರಚಾರ ಪುಸ್ತಕ ಮಾಲೆ

240

ಪಾಲ್ಕುರಿಕೆ ಸೋಮನಾಥ

ಆರ್ವಿಯಸ್ ಸುಂದರಂ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ–೨೪೦

ಪಾಲ್ಕುರಿಕೆ ಸೋಮನಾಥ

ಆರ್ವಿಯಸ್. ಸುಂದರಂ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

1983

ಮೊದಲನೆಯ ಮುದ್ರಣ : ೧೯೮೩

೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ "ಸೆನೆಟ್" ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ, ಮೊದಲನೆಯ 'ಕಾನ್ವೋಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರಿಕೃತವಾಗದೆ ನಾಡಿನ ಮೂಲೆಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಪ್ರಸಾರಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರೂ ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು,

ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವ ವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ ವಿಶಾಲಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನುಕುರಿತ ಇನ್ನೂರ ಮೂವತ್ತೊಂಬತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಆರ್ವಿಯಸ್ ಸುಂದರಂ ಅವರ 'ಪಾಲ್ಕುರಿಕೆ ಸೋಮನಾಥ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು

ಕೆ. ಎಸ್. ಹೆಗ್ಡೆ

ಕುಲಪತಿ

ಅರಿಕೆ

ಪಾಲ್ಕುರಿಕೆ ಸೋಮನಾಥ ತೆಲುಗರಿಗೆ ಮಾತ್ರವಲ್ಲದೆ ಕನ್ನಡಿಗರಿಗೂ ಚಿರಪರಿಚಿತನಾಗಿರುವ ಕವಿ. ಇವನು ತೆಲುಗಿನಲ್ಲಿ ವಿಶಿಷ್ಟವಾದ ಮತ್ತು ವೈವಿಧ್ಯಮಯವಾದ ಕಾವ್ಯನಿರ್ಮಾಣ ಕೈಗೊಂಡಿದ್ದರೂ, ಕನ್ನಡ ಕವಿಗಳಿಂದಲೇ ಹೆಚ್ಚು ಸ್ತುತಿಗೆ ಪಾತ್ರನಾಗಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಬಸವೇಶ್ವರನ ವ್ಯಕ್ತಿತ್ವ ಮತ್ತು ಸ್ವಭಾವಗಳ ನಿರೂಪಣೆಗೆ ಪಾಲ್ಕುರಿಕೆ ಸೋಮನಾಥನ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ.

ತೆಲುಗು, ಸಂಸ್ಕೃತ ಮತ್ತು ಕನ್ನಡಗಳಲ್ಲಿ ಕೃತಿಗಳನ್ನು ರಚಿಸಿ ದಕ್ಷಿಣ ಭಾರತದ ಶೈವ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನಿತ್ತ ಪಾಲ್ಕುರಿಕೆ ಸೋಮನಾಥನನ್ನು ಕುರಿತು ಈ ಚಿಕ್ಕ ಪುಸ್ತಕದಲ್ಲಿ ಸಮಗ್ರವಾಗಿ ಹೇಳಲು ಸಾಧ್ಯವಿಲ್ಲ. ಆದರೂ ಈ ಕವಿಯ ಸಮಗ್ರ ಸಾಧನೆಯ ಸ್ಥೂಲ ಪರಿಚಯವನ್ನು ಕೊಡಲು ಈ ಪ್ರಚಾರೋಪನ್ಯಾಸಮಾಲೆಯ ಪುಸ್ತಕದಲ್ಲಿ ಪ್ರಯತ್ನಿಸಿದ್ದೇನೆ.

ಈ ಪುಸ್ತಕದ ರಚನೆಯನ್ನು ನನಗೆ ವಹಿಸಿಕೊಟ್ಟ ಪ್ರಸಾರಾಂಗದ ನಿರ್ದೇಶಕರಾದ ಮಾನ್ಯ ಶ್ರೀ ಕೆ. ಟಿ. ವೀರಪ್ಪನವರಿಗೆ ಕೃತಜ್ಞತಾಪೂರ್ವಕ ವಂದನೆಗಳು. ನನ್ನ ಬರವಣಿಗೆಯಲ್ಲಿ ಸಹಕರಿಸಿದ ಕುಮಾರಿ ಅಕ್ಕಮಹಾದೇವಿಗೆ ಕೃತಜ್ಞತೆಗಳು. ತುಂಬ ಕಡಮೆಯ ಅವಧಿಯಲ್ಲಿ ಈ ಪುಸ್ತಕವನ್ನು ಮುದ್ರಿಸಿಕೊಟ್ಟ ವಿಶ್ವವಿದ್ಯಾನಿಲಯದ ಮುದ್ರಣಾಲಯದವರಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕಾಗಿದೆ.

ಆರ್ಫಿಯಸ್ ಸುಂದರಂ

೨೩–೫–೧೯೮೩

ಪಾಲ್ಕುರಿಕೆ ಸೋಮನಾಥ

"ಅನುವಿನಿಂದಂ ಚತುರ್ವೇದಂಗಳಂ ಮತ್ತೆ
ಮಿನುಗುವಿರ್ಪತ್ತೆಂಟು ದಿವ್ಯಾಗಮಂಗಳಂ
ವಿನುತೋಪನಿಷದಖಿಳ ಪೌರಾಣಗಳನುರುತರ ಸ್ಮೃತಿ
ನಿಕಾಯಂಗಳಂ ॥

ಘನತರದ ಕಾವ್ಯನಾಟಕವಲಂಕಾರವಮ
ಳಿನ ಲಸದ್ವ್ಯಾಕರಣ ತರ್ಕಮುಂತಾದುವಂ
ಮನದಲ್ಲಿ ನೆನೆಯಲಸಿತರೊಳೆರಸನೆಯೊಳು ನೆಲೆಗೊಂಡವಾಗು
ರುವರ್ಕೈಗೆ ॥"

ತೋಂಟದ ಸಿದ್ಧಲಿಂಗ ಶಿವಯೋಗಿಯು "ಪಾಲ್ಕುರಿಕೆ ಸೋಮೇಶ್ವರ ಪುರಾಣ"ದಲ್ಲಿರುವ ಈ ಪದ್ಯ ಸೋಮನಾಥನ ಪಾಂಡಿತ್ಯಕ್ಕೆ ಹಿಡಿದ ನಂದಾದೀವಿಗೆಯಾಗಿದೆ. ಕನ್ನಡ ಭಾಷೆಯಲ್ಲಿ ಸೋಮನಾಥ ಕವಿಯನ್ನು ಕುರಿತ ಒಂದು ಪುರಾಣವೇ ರಚಿತವಾಗಬೇಕಾದರೆ, ಅವನ ಪ್ರಖ್ಯಾತಿಯ ಬಗೆಗೆ ಎರಡನೆಯ ಮಾತಿಗೆ ಅವಕಾಶವಿಲ್ಲ. ಇಷ್ಟಾದರೂ ಪಾಲ್ಕುರಿಕೆ ಸೋಮನಾಥನ ಕಾವ್ಯ ನಿರ್ಮಾಣ ಶಕ್ತಿಯನ್ನು ಪ್ರತಿಬಿಂಬಿಸುವ ಯಾವ ರಚನೆಯೂ ಕನ್ನಡದಲ್ಲಿಲ್ಲ. ಇವನು ತೆಲುಗು ಭಾಷೆಯ ಪ್ರಸಿದ್ಧ ಕವಿ; ಆ ಭಾಷೆಯಲ್ಲಿ 'ಪಾಲ್ಕುರಿಕಿ' ಸೋಮನಾಥನೆಂದು ಹೆಸರಾದವನು.

ಕನ್ನಡದ ಬಸವೇಶ್ವರನಿಗೆ ತೆಲುಗು ನಾಡಿನಲ್ಲಿ ಪ್ರಸಿದ್ಧಿಯನ್ನು ತಂದುಕೊಟ್ಟವನು ಪಾಲ್ಕುರಿಕೆ ಸೋಮನಾಥನೇ. ಇವನ ತೆಲುಗು 'ಬಸವಪುರಾಣ'ದ ಮಹತ್ತ್ವವನ್ನರಿತ ಭೀಮಕವಿ, ಆ ಕಾವ್ಯವನ್ನು ಕನ್ನಡಕ್ಕೆ ಅನುವಾದಿಸಿದನು. ಬಸವೇಶ್ವರ ನಂದಿಯ ಅವತಾರವೆಂದು ಸೋಮನಾಥ ಹೊಗಳಿ ಹಾಡಿದರೆ, ಸೋಮನಾಥ ಭೃಂಗಿಯ ಅವತಾರವೆಂದು ತೋಂಟದಾರ್ಯನು

ಕನ್ನಡದಲ್ಲಿ ಷಟ್ಪದೀಗಾನ ಮಾಡಿದನು. ತೆಲುಗು ಕವಿಯಾದ ಸೋಮನಾಥನನ್ನು ತೆಲುಗು ಕವಿಗಳಿಗಿಂತ ಮಿಗಿಲಾಗಿ ಕನ್ನಡ ಕವಿಗಳು ಸ್ತುತಿಸಿದರು. ಕನ್ನಡ ವೀರಶೈವ ಸಾಹಿತ್ಯಕ್ಕೆ ಪಾಲ್ಕುರಿಕೆ ಸೋಮನಾಥನ ಕೊಡುಗೆ ಪರೋಕ್ಷವಾದುದು; ಆದರೆ ಗಣನೀಯ ವಾದುದು. ಐತಿಹಾಸಿಕ ವ್ಯಕ್ತಿಯಾದ ಬಸವೇಶ್ವರನು ಪುರಾಣ ಪುರುಷನಾಗಲು ಪಾಲ್ಕುರಿಕೆ ಸೋಮನಾಥನು ವಹಿಸಿದ ಪಾತ್ರ ಪ್ರಮುಖವಾದುದು.

ತೆಲುಗು, ಕನ್ನಡ, ಸಂಸ್ಕೃತ, ಪ್ರಾಕೃತ. ತಮಿಳು. ಮರಾಠಿ ಮುಂತಾದ ಹಲವಾರು ಭಾಷೆಗಳ ಪರಿಚಯ, ವೇದಾಗಮಗಳು, ಉಪನಿಷತ್ತುಗಳು; ಕಾವ್ಯ, ನಾಟಕಗಳೆಲ್ಲಾ ನಾಲಗೆಯ ಮೇಲೆ ನಾಟ್ಯವಾಡುವಷ್ಟು ಪಾಂಡಿತ್ಯ. ದೇಶೀಯ ಛಂದಸ್ಸು. ನುಡಿ-ನಾಣ್ಣುಡಿಗಳ ಮೇಲೆ ತುಂಬು ಅಭಿಮಾನ. ಗೌರವ. ಶೈವಧರ್ಮದ ಪ್ರಚಾರದಲ್ಲಿ ಆಸಕ್ತಿ ಇದ್ದ ಪಾಲ್ಕುರಿಕೆ ಸೋಮನಾಥ ಪ್ರತ್ಯೇಕ ವ್ಯಕ್ತಿತ್ವವುಳ್ಳ ಒಬ್ಬ ಕವಿ. ಹೊಸ ಕಾವ್ಯ ಪ್ರಕಾರಗಳ ಸೃಷ್ಟಿಗೆ ಕಾರಣ ಕರ್ತನಾದ ಸೃಜನಶೀಲ ಸಾಹಿತಿ.

ಸೋಮನಾಥನ ಕಾಲ

ಮೇಲಿನ ಪೀಠಿಕೆಯಿಂದ ಸೋಮನಾಥ ಬಸವೇಶ್ವರನಿಗೆ ಅನಂತರ ಕಾಲದವನೆಂದು. ಭೀಮಕವಿಗಿಂತ ಹಿಂದಿನವನೆಂದು ಮನ ವರಿಕೆಯಾಗುತ್ತದೆ. ಕವಿಚರಿತೆಕಾರರು ಮೊದಲುಗೊಂಡು ಸೋಮ ನಾಥನ ಬಗೆಗೆ ಬರೆದ ಕನ್ನಡ ವಿದ್ವಾಂಸರಲ್ಲಿ ಅನೇಕರು ಇವನು ಕ್ರಿ. ಶ. ೧೧೯೫ರಲ್ಲಿದ್ದವನೆಂದು ಹೇಳಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಕನ್ನಡ ಕವಿ ಸೋಮರಾಜನು ತನ್ನ 'ಉದ್ಭಟಕಾವ್ಯ' ದಲ್ಲಿ ಪಾಲ್ಕುರಿಕೆ ಸೋಮನಾಥನನ್ನು ಸ್ತುತಿಸಿರುವುದು.

ಸೋಮರಾಜನು ೧೨೨೨ರಲ್ಲಿದ್ದನೆಂದು ಕವಿಚರಿತೆಕಾರರು ಬರೆದಿದ್ದರು. ಆದರೆ ಸೋಮರಾಜನ ಕಾಲ ೧೫೧೦ ಎಂದು ಈಗ ವಿದ್ವಾಂಸರು ಭಾವಿಸುತ್ತಿರುವುದರಿಂದ ಪಾಲ್ಕುರಿಕೆ ಸೋಮನಾಥನ ಕಾಲಕ್ಕೆ ಸಂಬಂಧಿಸಿದ ಮುಖ್ಯ ಆಧಾರ ಕಳಚಿ ಬಿದ್ದಂತಾಯಿತು. ಪಾಲ್ಕುರಿಕೆ ಸೋಮನಾಥ ೧೨ನೆಯ ಶತಮಾನದವನೆಂದು ಹೇಳುವ ತೆಲುಗು ವಿದ್ವಾಂಸರಿಗೂ 'ಉದ್ಭಟಕಾವ್ಯ'ವೇ ಮುಖ್ಯ ಆಧಾರ. ಆದರೆ ಈ ಕವಿ ಎರಡನೆಯ ಪ್ರತಾಪರುದ್ರನ (೧೨೯೨–೧೩೨೬) ಕಾಲದವನೆಂದು ಹೇಳಲು ಹೆಚ್ಚು ಆಧಾರಗಳಿವೆ. ಏಕಾಮ್ರನಾಥ, ಪಿಡುಪರ್ತಿ ಸೋಮನಾಥ, ಮಲ್ಲಿಕಾರ್ಜುನಕವಿ ಎಂಬ ತೆಲುಗು ಕವಿಗಳು, ಕನ್ನಡದ ತೋಂಟದಾರ್ಯನೂ ಸೋಮನಾಥ ಎರಡನೆಯ ಪ್ರತಾಪ ರುದ್ರನನ್ನು ನೋಡಿದ ವೃತ್ತಾಂತವನ್ನು ಬರೆದಿದ್ದಾರೆ. ಸೋಮನಾಥನೇ ಒಂದು ಕಡೆ ತಾನು ಪಂಡಿತಾರಾಧ್ಯನ (೧೨ನೆಯ ಶತಮಾನ) ಸಮಕಾಲೀನನಾದ ಬೆಲಿದೇವಿ ವೇಮಾರಾಧ್ಯನ ಮೊಮ್ಮಗನ ಶಿಷ್ಯನೆಂದು ಹೇಳಿಕೊಂಡಿದ್ದಾನೆ. ಒಟ್ಟಿನಲ್ಲಿ ಪಾಲ್ಕುರಿಕೆ ಸೋಮನಾಥನು ಸುಮಾರು ೧೨೪೦ರಲ್ಲಿ ಹುಟ್ಟಿ ೧೩೦೦–೨೦ರವರೆಗೆ ಬದುಕಿದ್ದನೆಂದು ಊಹಿಸಬಹುದು.

ದೇಶ-ಭಾಷೆ

ಪಾಲ್ಕುರಿಕೆ ಸೋಮನಾಥ ಆಂಧ್ರದವನೆಂದೂ, ಅವನ ಮಾತೃ ಭಾಷೆ ತೆಲುಗೆಂದೂ ಸಾಮಾನ್ಯವಾದ ತಿಳುವಳಿಕೆ. ಇವನು ಗೋದಾವರೀ ಪ್ರಾಂತ್ಯದವನೆಂದು ಕವಿಚರಿತೆಕಾರರು ಮುಂತಾದವರು ಬರೆಯಲು ಆಧಾರವಿಲ್ಲ. ತನ್ನ ಮಾತೃ ಭಾಷೆಯಾದ ತೆಲುಗಿನಲ್ಲಿ ಸತ್ವಪೂರ್ಣ ಕಾವ್ಯಗಳನ್ನು ಬರೆದಿರುವ ಸೋಮನಾಥ ಆಂಧ

ಪ್ರದೇಶದ ತೆಲಂಗಾಣ ಪ್ರಾಂತ್ಯದ ಪಾಲ್ಕುರಿಕಿ ಎಂಬ ಗ್ರಾಮದವನು.

ಸೋಮನಾಥನ 'ಪಾಲ್ಕುರಿಕೆ' ಕರ್ನಾಟಕದ ತುಮಕೂರು ಜಿಲ್ಲೆಯ ಹಾಲ್ಕುರಿಕೆ ಎಂಬ ಗ್ರಾಮವೆಂದು ಸಿ. ನಾರಾಯಣರಾವು ಮತ್ತು ಕೆ. ಸುಬ್ಬರಾಮಪ್ಪ—ಇವರು ಅಭಿಪ್ರಾಯಪಟ್ಟರು. ಕೆ. ಸುಬ್ಬರಾಮಪ್ಪನವರು ಪಮ್ಮಿಸೆಟ್ಟಿಯ 'ಗುರುಭಕ್ತಾಂಡಾರಿ ಚರಿತೆ'ಯ ಒಂದು ಉಲ್ಲೇಖವನ್ನು ಇದಕ್ಕೆ ಪೋಷಕವಾಗಿ ಸ್ವೀಕರಿಸಿದರು. 'ಪಾಲ್ಕುರಿಕೆ ಸೋಮನಾಥನು ತನ್ನ ತಂದೆಯ ಭಾಷೆಯಲ್ಲಿ ಬರೆದ' ಗ್ರಂಥದಿಂದ ತಾನು ಈ ಕಾವ್ಯವನ್ನು ಕನ್ನಡಿಸುತ್ತಿರುವುದಾಗಿ ಕವಿ ಹೇಳಿದ್ದಾನೆ. ಸೋಮನಾಥನ ತಂದೆಯ ಭಾಷೆ ತೆಲುಗು. ಆದುದರಿಂದ. ತಾಯಿಭಾಷೆ ಕನ್ನಡವಾಗಿರಬೇಕೆಂದು ಕೆ. ಸುಬ್ಬರಾಮಪ್ಪನವರ ಊಹೆ. ಆದರೆ ಇದನ್ನು ಖಚಿತಪಡಿಸುವ ಇನ್ನಾವ ಆಧಾರವೂ ಇಲ್ಲ. ಆದರೆ ಸೋಮನಾಥ ಆಂಧ್ರದ ಪಾಲ್ಕುರಿಕಿಯವನೆಂದು ಹೇಳಲು ಹೆಚ್ಚು ಆಧಾರಗಳಿವೆ.

ಪಾಲ್ಕುರಿಕೆ ಸೋಮನಾಥನ ತೆಲುಗು ಗ್ರಂಥಗಳಲ್ಲೂ, ಆವನನ್ನು ಕುರಿತ ಕನ್ನಡ ಗ್ರಂಥಗಳಲ್ಲೂ ಸಿಕ್ಕುವ ಕವಿಯ ಜೀವನವನ್ನು ಕುರಿತ ಆಧಾರಗಳನ್ನು ನೋಡಿದರೆ ಈ ಕವಿ ಪ್ರತಾಪರುದ್ರನ ರಾಜಧಾನಿಯಾದ ಓರುಗಲ್ಲಿಗೆ ಸಮೀಪದಲ್ಲಿಯೇ ಇದ್ದಿರಬೇಕೆಂದು ತೋರುತ್ತದೆ. ತೆಲಂಗಾಣದ ನಲ್ಗೊಂಡ ಜಿಲ್ಲೆಯ ಪಾಲ್ಕುರಿಕಿ ಎಂಬ ಗ್ರಾಮ ಈಗ ಪಾಲುಕುರ್ತಿ ಎಂಬ ಹೆಸರಿನಲ್ಲಿದೆ. ತೆಲುಗುದೇಶದ ಅನೇಕ ಶಾಸನಗಳಲ್ಲಿ 'ಕುರಿಕಿ' ಎಂದು ಕೊನೆಗೊಳ್ಳುವ ಗ್ರಾಮನಾಮಗಳಿವೆ. ೧೨—೧೩ ಶತಮಾನಗಳಿಗೆ ಸೇರಿದ ಓರುಗಲ್ಲು ಸಮೀಪದ ಒಂದು ಶಾಸನದಲ್ಲಿ 'ಎಲಕುರಿಕಿ' ಎಂಬ ಹೆಸರಿದೆ. ಅದು ಕೂಡ ಈಗ 'ಎಲಕುರ್ತಿ'

ಆಗಿದೆ. ಆದುದರಿಂದ ' ಪಾಲಕುರಿಕಿ ' ' ಪಾಲಕುರ್ತಿ 'ಆಗಿದ್ದು ಸ್ವಾಭಾವಿಕವೇ ಎನಿಸುತ್ತದೆ. ಇಂದಿಗೂ ಮೇಲೆ ಹೆಸರಿಸಿದ ಪಾಲಕುರ್ತಿ ಗ್ರಾಮದಲ್ಲಿ ಸೋಮೇಶ್ವರ ದೇವಸ್ಥಾನವಿದೆ. ಸೋಮನಾಥನ ತಾಯಿತಂದೆಯರು ತಮ್ಮ ಗ್ರಾಮದ ಸೋಮೇಶ್ವರನ ಹೆಸರನ್ನೇ ಮಗನಿಗೆ ಇಟ್ಟಿರಬೇಕು. ಕನ್ನಡದಲ್ಲಿ ಸೋಮನಾಥನ ಜೀವನ ಚಾರಿತ್ರ್ಯವನ್ನು ಬರೆದ ತೋಂಟದಾರ್ಯನು ತನ್ನ ಗ್ರಂಥಕ್ಕೆ ' ಪಾಲ್ಕುರಿಕೆ ಸೋಮೇಶ್ವರ ಪುರಾಣ ' ವೆಂದು ಹೆಸರಿಟ್ಟನು. ಅಷ್ಟೇ ಅಲ್ಲದೆ ತೋಂಟದಾರ್ಯ ಕವಿ ಪಾಲ್ಕುರಿಕೆ ಆಂಧ್ರದಲ್ಲಿದೆ ಎಂದು ಸ್ಪಷ್ಟವಾಗಿ ಹೇಳಿ, ಆ ಊರು ಶ್ರೀ ಶೈಲಕ್ಕೆ ಈಶಾನ್ಯ ಭಾಗದಲ್ಲಿದೆ ಎಂದು ತಿಳಿಸಿದ್ದಾನೆ. ಮಲ್ಲಿಕಾರ್ಜುನನೆಂಬವನು ರಚಿಸಿದ ' ಪಾಲ್ಕುರಿಕಿ ಸೋಮೇಶ್ವರ ಚರಿತ ' ಎಂಬ ತೆಲುಗು ಯಕ್ಷಗಾನದಲ್ಲಿಯೂ ಸೋಮನಾಥನ ಹುಟ್ಟಿದ ಊರು ಆಂಧ್ರದ ಪಾಲ್ಕುರಿಕಿ ಎಂದೇ ಹೇಳಲಾಗಿದೆ.

ಆಂಧ್ರದಲ್ಲಿ ಹುಟ್ಟಿದ ಪಾಲ್ಕುರಿಕೆ ಸೋಮನಾಥ ಬಸವೇಶ್ವರನನ್ನು ಕುರಿತು ಕೇಳಿ, ಅವನ ಮೇಲೆ ಭಕ್ತಿಯನ್ನು ಬೆಳೆಸಿಕೊಂಡು, ತನ್ನ ಮುಪ್ಪಿನಲ್ಲಿ ಕರ್ಣಾಟಕಕ್ಕೆ ಬಂದು, ಕನ್ನಡವನ್ನೂ ಕಲಿತಿರಬಹುದು. ಸೋಮನಾಥನು ಕೆಲವು ಸಣ್ಣಪುಟ್ಟ ಕನ್ನಡ ಗ್ರಂಥಗಳನ್ನೂ ಬರೆದಿದ್ದಾನೆ. ಅವು ಈ ಕವಿಗೆ ಕನ್ನಡದಲ್ಲಿ ಆಳವಾದ ಪಾಂಡಿತ್ಯ ಇದ್ದುದಕ್ಕೆ ಯಾವ ಸಾಕ್ಷ್ಯವನ್ನೂ ಒದಗಿಸುವುದಿಲ್ಲ. ಸೋಮನಾಥ ಮುಪ್ಪಿನಲ್ಲಿ ಕನ್ನಡನಾಡಿಗೆ ಬಂದು ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಕಲ್ಯ ಎಂಬ ಸ್ಥಳದಲ್ಲಿ ಲಿಂಗೈಕ್ಯನಾದನೆಂದು ' ಪಾಲ್ಕುರಿಕೆ ಸೋಮೇಶ್ವರ ಪುರಾಣ ' ದಲ್ಲಿರುವ ಕಥೆಯು ನಂಬತಕ್ಕದ್ದಾಗಿದೆ.

ಜೀವನ–ವ್ಯಕ್ತಿತ್ವ

ಪಾಲ್ಕುರಿಕೆ ಸೋಮನಾಥನನ್ನು ಕುರಿತ ವಿಷಯಗಳು ಹೆಚ್ಚಾಗಿ. ಕನ್ನಡ ಗ್ರಂಥಗಳಲ್ಲೇ ಲಭಿಸುತ್ತಿವೆ. ಏಕಾಮ್ರನಾಥನ 'ಪ್ರತಾಪ ಚರಿತ್ರಮು,' ಪಿಡುಪರ್ತಿ ಸೋಮನಾಥನ ಚಂಪೂ 'ಬಸವ ಪುರಾಣಮು' ಎಂಬ ತೆಲುಗು ಗ್ರಂಥಗಳಲ್ಲಿಯೂ ಸ್ವಲ್ಪ ಮಟ್ಟಿಗೆ ಪಾಲ್ಕುರಿಕೆ ಸೋಮನಾಥನ ಜೀವನದ ಬಗೆಗೆ ಹೇಳಲಾಗಿದೆ. ಕನ್ನಡದಲ್ಲಿ ಅನೇಕ ಕವಿಗಳು ಸೋಮನಾಥನನ್ನು ಸ್ತುತಿಸಿದ್ದಾರೆ. ಸೋಮರಾಜ, ಭೀಮಕವಿ, ಪದ್ಮಣಾಂಕ. ಬೊಮ್ಮರಸ, ನೀಲಕಂಠಾಚಾರ್ಯ, ಗುಬ್ಬಿಯಮಲ್ಲಣಾರ್ಯ ತೋಂಟ ದಾರ್ಯ, ವಿರೂಪಾಕ್ಷ ಪಂಡಿತ, ಸಿದ್ಧನಂಜೇಶ. ಪಮ್ಮಿಸೆಟ್ಟಿ. ಷಡಕ್ಷರ ದೇವ, ಚೆನ್ನಮಲ್ಲೇಶ ಮುಂತಾದವರು ಸೋಮನಾಥನನ್ನು ತಮ್ಮ ಗ್ರಂಥಗಳಲ್ಲಿ ಹೊಗಳಿದ್ದಾರೆ. ತೋಂಟದ ಸಿದ್ಧಲಿಂಗ ಕವಿಯ 'ಪಾಲ್ಕುರಿಕೆ ಸೋಮೇಶ್ವರ ಪುರಾಣ'ದಲ್ಲಿ ಸೋಮನಾಥನ ಜೀವನದ ಅನೇಕ ವಿಷಯಗಳು ವರ್ಣಿತವಾಗಿವೆ. ಈ ಕೃತಿಯಲ್ಲಿ ಸೋಮನಾಥ ಭೃಂಗೀಶನ ಅವತಾರವೆಂದು ಹೇಳಲಾಗಿದೆ. ಸೋಮನಾಥನ ಸ್ವಸ್ಥಳದ ವರ್ಣನೆ, ವಂಶಾವಳಿ. ಜನನ. ಬಾಲ್ಯ ಲೀಲೆ. ಅವನು ಆಚರಿಸಿದ ೭೪ ಶೀಲಗಳ ವರ್ಣನೆ ಇದೆ. ಇವರಲ್ಲಿ ಸೋಮನಾಥನ ಕೆಲವು ಗ್ರಂಥಗಳ ಬಗ್ಗೆಯೂ ಹೇಳಲಾಗಿದೆ. ಚಕ್ರಪಾಣಿ ರಂಗನಾಥನನ್ನು ಸೋಮನಾಥ ವಾದದಲ್ಲಿ ಸೋಲಿಸಿ. ರಂಗನಾಥನು ವೈಷ್ಣವಧರ್ಮವನ್ನು ಬಿಟ್ಟು ಶೈವನಾಗುವಂತೆ ಮಾಡಿದ ಪ್ರಸಂಗವನ್ನು ವರ್ಣಿಸಿದ್ದಾನೆ. ಇದಲ್ಲದೆ ಇನ್ನೂ ಅನೇಕ ಇತರ ವಿಷಯಗಳು, ವಿವರಗಳು ನಮಗೆ 'ಪಾಲ್ಕುರಿಕೆ ಸೋಮೇಶ್ವರ ಪುರಾಣ'ದಿಂದ ಲಭಿಸುತ್ತಿವೆ. ಈ ಗ್ರಂಥವನ್ನು ಆಧರಿಸಿ ಕೊಂಪೋಲಿ ಮಲ್ಲಿಕಾರ್ಜುನನೆಂಬವನು 'ಸೋಮೇಶ್ವರ ಚರಿತ' ಎಂಬ ಯಕ್ಷಗಾನವನ್ನು ತೆಲುಗಿನಲ್ಲಿ ಬರೆದಿದ್ದಾನೆ.

ಕ್ರಿ.ಶ. ೧೨೪೦ರ ಸುಮಾರಿನಲ್ಲಿ ಪಾಲ್ಕುರಿಕೆ ಗ್ರಾಮದಲ್ಲಿ ಹುಟ್ಟಿದ ಸೋಮನಾಥನ ತಾಯಿ ಶ್ರೀಯಾದೇವಿ, ತಂದೆ ವಿಷ್ಣು ರಾಮದೇವ. ಈತನಿಗೆ ಕಾವ್ಯರಹಸ್ಯಗಳನ್ನು ಹೇಳಿಕೊಟ್ಟ ಗುರು ಕರಸ್ಥಲದ ವಿಶ್ವನಾಥ. ಸೋಮನಾಥನನ್ನು ಕನ್ನಡ ಕವಿಗಳು ಕೆಲವರು ಸೋಮಾರಾಧ್ಯನೆಂದು ಕರೆದಿದ್ದಾರೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿ ವೇದ ವೇದಾಂಗಗಳನ್ನು ಸಾಂಗೋಪಾಂಗವಾಗಿ ಅಧ್ಯಯನ ಮಾಡಿದ ಸೋಮನಾಥ, ಬಸವೇಶ್ವರನ ಧರ್ಮವನ್ನು ಸ್ವೀಕರಿಸಿದ ಮೇಲೆ ' ಜಂಗಮ 'ನಾದ. ತೆಲುಗರಲ್ಲಿಯೂ ಜಂಗಮ ಕುಲವೆಂಬುದಿದೆ. ಕೆಲವು ವಿದ್ವಾಂಸರು ಪಾಲ್ಕುರಿಕೆ ಸೋಮನಾಥ ಜಂಗಮಕುಲಜನೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸೋಮನಾಥ ವೀರಶೈವ ದೀಕ್ಷೆಯನ್ನು ಪಡೆದು ' ಜಂಗಮ 'ನಾದನೆಂಬುದಕ್ಕೆ ಹೆಚ್ಚು ಆಧಾರಗಳಿವೆ. ತನ್ನ ಪ್ರಾರಂಭದ ಕೃತಿಗಳಲ್ಲಿ ತಾಯಿ ತಂದೆಯರ ಹೆಸರನ್ನು ಹೇಳಿಕೊಂಡ ಸೋಮನಾಥ, ' ಪಂಡಿತಾರಾಧ್ಯ ಚರಿತ್ರ 'ವನ್ನು ಬರೆಯುವ ಕಾಲಕ್ಕೆ ವೀರಶೈವನಾಗಿ ' ಭಕ್ತರ ಮಗ, ಬಸವಪುತ್ರ, ಬಸವಗೋತ್ರ, ಬಸವನಮನೆಯಲ್ಲಿ ಬಿದ್ದಿರುವ ಬಸವನ ಮಗ ' ತಾನೆಂದು ಹೇಳಿಕೊಂಡಿದ್ದಾನೆ. ಇನ್ನೊಂದು ಕಡೆ 'ಉಮಾ ಮಾತಾ ಪಿತಾರುದ್ರ ' ಎಂಬ ಪುರಾಣೋಕ್ತಿಯ ಪ್ರಕಾರ ತಾನು ಈಶ್ವರ ಕುಲಜನೆಂದು ಹೇಳಿದ್ದಾನೆ. " ಶಿವದೀಕ್ಷೆಯನ್ನು ಪಡೆದ ಶಿವಭಕ್ತರು ಪೂರ್ವ ಜಾತಿಯನ್ನು ಕುರಿತು ಯೋಚಿಸುವುದರಿಂದ ರೌರವನರಕ ಪ್ರಾಪ್ತಿಯಾಗುತ್ತದೆ. ಹೀಗೆ ಯೋಚಿಸುವುದು ಶಿವನನ್ನು ಪಾಷಾಣವೆಂದು ಭಾವಿಸುವುದಕ್ಕೆ ಸಮಾನ " ಎಂದು ಪಾಲ್ಕುರಿಕೆ ಸೋಮನಾಥನೇ ತನ್ನ " ಅನುಭವಸಾರ " (ಪದ್ಯ ೧೮೧)ದಲ್ಲಿ ಹೇಳಿರುವುದನ್ನು ಗಮನಿಸಬಹುದು. ಅದೇ ಗ್ರಂಥದ ಒನೆಯ ಪದ್ಯದಲ್ಲಿ ಸೋಮನಾಥ ಹೀಗೆನ್ನುತ್ತಾನೆ:

'ಭೃಂಗಿರಿಟ ಗೋತ್ರುಡನುಗುರು
ಲಿಂಗ ತನೂಜುಂಡು ಶಿವಕುಲೀನುಡು, ದುರ್ವ್ಯಾ
ಸಂಗ ವಿವರ್ಜಿತ ಚರಿತುಡ
ಜಂಗಮಲಿಂಗ ಪ್ರಸಾದ ಸತ್ಪ್ರಾಣುಂಡನ್'

(ನಾನು ಭೃಂಗಿರಿಟ ಗೋತ್ರೋದ್ಭವನು. ಗುರುಲಿಂಗ ಪುತ್ರನು, ಶಿವಕುಲದವನು, ಕೆಟ್ಟ ವ್ಯಾಸಂಗಗಳನ್ನು ಬಿಟ್ಟವನು, ಜಂಗಮ ಲಿಂಗ ಪ್ರಸಾದದಿಂದ ಸತ್ಪ್ರಾಣ ಪಡೆದವನು).

ಬಸವಮತ ವ್ಯಾಪ್ತಿಯನ್ನು ಪ್ರಾಮಾಣಿಕವಾಗಿ ಕೈಗೊಂಡ ಪಾಲ್ಕುರಿಕೆ ಸೋಮನಾಥ, ಸಮಕಾಲೀನ ಶಿಷ್ಟಕವಿಗಳಿಂದ ತೊಂದರೆಗಳನ್ನು ಅನುಭವಿಸಲೇಬೇಕಾಯಿತು. ಪ್ರತಾಪರುದ್ರನು ಆಳ್ವಿಕೆಗೆ ಬಂದ ಹೊಸದರಲ್ಲಿ ಓರುಗಲ್ಲಿನ ಸ್ವಯಂಭೂ ದೇವಾಲಯಕ್ಕೆ ಹೋದನಂತೆ. ಅಲ್ಲಿ ಕೆಲವರು ಸೋಮನಾಥನ 'ಬಸವಪುರಾಣ'ವನ್ನು ಓದುತ್ತಿದ್ದರು. ರಾಜ ಒಬ್ಬ ಪಂಡಿತ ನನ್ನು 'ಏನದು' ಎಂದು ಕೇಳಿದ. 'ಪಾಲ್ಕುರಿಕಿಸೋಮಪಂಡಿತನು ಇತ್ತೀಚೆಗೆ ದ್ವಿಪದಿಯಲ್ಲಿ ಬರೆದ ಪುರಾಣ. ಅದು ಅಪ್ರಮಾಣವು, ಅನಾದ್ಯವು ಆದ ಕಾವ್ಯ' ಎಂದು ಆ ಧೂರ್ತ ವಿಪ್ರನು ಹೇಳಿದ ನಂತೆ. ಈ ವಿಷಯವನ್ನು ಶಿಷ್ಯರಿಂದ ತಿಳಿದ ಸೋಮನಾಥ ತನಗೆ ಅವಮಾನವಾಯಿತೆಂದು ಭಾವಿಸಿ ಓರುಗಲ್ಲಿಗೆ ಪಯಣಿಸಿದ. ಓರುಗಲ್ಲಿನ ಎಲ್ಲ ಜನರನ್ನೂ ತನ್ನ ಶಕ್ತಿಯಿಂದ ಕಾಲಿಗೆರಗುವಂತೆ ಮಾಡಿದನು.

ಬಸವೇಶ್ವರ ಮತ್ತು ಪಂಡಿತಾರಾಧ್ಯರ ಚರಿತವನ್ನು ಕೀರ್ತಿಸುವಾಗ ಎಷ್ಟು ವಿನಯಶೀಲನಾಗಿ ಕಾಣುವನೋ, ಪರಮತ ಖಂಡನೆಯಲ್ಲಿ ಸೋಮನಾಥ ಅಷ್ಟೇ ಕಟುವಾಗಿ ಕಾಣುವನು. ಸಾಹಿತ್ಯದಲ್ಲಿ ಸ್ವಾತಂತ್ರ್ಯಪ್ರಿಯತೆಯನ್ನು ತೋರಿಸಿದ ಮೊಟ.

ಮೊದಲ ತೆಲಗು ಕವಿ ಸೋಮನಾಥ. ದೇಶೀಯ ಛಂದಸ್ಸಿಗೆ, ದೇಶೀಯ ಕಥಾವಸ್ತುವಿಗೆ, ದೇಶೀಯವಾದ ನುಡಿಗಟ್ಟುಗಳಿಗೆ ಹೆಚ್ಚು ಮಾನ್ಯತೆಯನ್ನು ಕೊಟ್ಟ ದೇಸಿಕವಿ ಈತ. ಈತನ ಕಾವ್ಯಗಳನ್ನು ಅನಂತರ ಕಾಲದ ಅನೇಕ ಪ್ರೌಢಕವಿಗಳು ಅನುಸರಿಸಿದ್ದಾರೆ. ತೆಲುಗಿನ ದ್ವಿಪದಿ ಸಾಹಿತ್ಯಕ್ಕೆ ಮೂಲ ಸ್ಫೂರ್ತಿ ಸೋಮನಾಥನದೇ. ತೆಲುಗು ಸಾಹಿತ್ಯದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ ಈ ಕವಿಯನ್ನು ಅನಂತರ ಕಾಲದ ಪಂಡಿತ ಕವಿಗಳು ಸ್ತುತಿಸದಿರಲು ಕಾರಣವೇನೆಂದು ತೆಲುಗು ವಿದ್ವಾಂಸರು ವಿವೇಚಿಸಿದ್ದಾರೆ. ತೆಲುಗು ನಾಡಿನಲ್ಲಿ ವೀರಶೈವ ಧರ್ಮಕ್ಕೆ ಹೆಚ್ಚಿನ ಪ್ರಚಾರ ಇಲ್ಲದಿರುವುದೇ ಕಾರಣವೆಂದು ಕೆಲವರ ಅಭಿಪ್ರಾಯ. ಈ ಕವಿ 'ಪ್ರಶಾಂತಚಿತ್ತ'ದವನಲ್ಲದಿರುವುದೇ ಕಾರಣವೆಂದು ರಾಳ್ಳಪಲ್ಲಿ ಅನಂತಕೃಷ್ಣಶರ್ಮರ ಅಭಿಪ್ರಾಯ. "ಆತನದು ಹತ್ತಿಕ್ಕಲಾಗದ ಉದ್ರೇಕ...ಈ ಉದ್ರೇಕದ ಪೊಳ್ಳು ಮಾತುಗಳಿಗೆ ಜೊತೆಯಾಗಿ ದಿಕ್ಕು, ದೆಸೆ, ತಲೆ, ಬಾಲವಿಲ್ಲದ ಪವಾಡಗಳ ಪುನರುಕ್ತಿಗಳಿಂದ ಸೋಮನಾಥನ ಗ್ರಂಥಗಳು ತುಂಬಿವೆ" (ಸಾರಸ್ವತಾ ಲೋಕಮು ಪು. ೧೧೦). ಇದೇನಿದ್ದರೂ ಸಂಸ್ಕೃತ ಪುರಾಣಗಳಿಗೆ, ಛಂದಸ್ಸಿಗೆ ಕಾವ್ಯ ಸಂಪ್ರದಾಯಗಳಿಗೆ ಗುಲಾಮರಾಗಿದ್ದ ಅನೇಕ ಆಂಧ್ರ ಪಂಡಿತ ಕವಿಗಳಿಗೆ ಸೋಮನಾಥನ ದೇಶೀಯ ಕಾವ್ಯಗಳು ರುಚಿಸದಿರುವುದು ಸಹಜವೇ. ಆದರೆ ಇದೇ ಕವಿಗಳು ಸೋಮನಾಥನ ಕಾವ್ಯಗಳನ್ನು ಓದಿ ಅನೇಕ ಕಡೆಗಳಲ್ಲಿ ಅನುಸರಿಸಿದ್ದಾರೆ. "ನಿರಂಕುಶಾಃ ಕವಯಃ" ಎಂಬ ಉಕ್ತಿಗೆ ಸಾಹಿತ್ಯದಲ್ಲಿ ಮತ್ತು ವ್ಯಕ್ತಿತ್ವದಲ್ಲಿ ಪಾಲ್ಕುರಿಕೆ ಸೋಮನಾಥನು ಪ್ರಥಮೋದಾಹರಣವಾಗಿದ್ದಾನೆ.

ವೈದುಷ್ಯ-ಕಾವ್ಯಧೋರಣೆ

ಮಾರ್ಗ ಕವಿಗಳ ಪಾಲಿಗೆ ಪಾಲ್ಕುರಿಕೆ ಸೋಮನಾಥನು ಏನೇ ಆಗಿರಲಿ, ನಿಜವಾದ ಅರ್ಥದಲ್ಲಿ ಈತ ಮಹಾಕವಿಯೇ ಸರಿ. ವಸ್ತುಕವನ್ನು ರಚಿಸಿದವನೇ ಮಹಾಕವಿಯೆಂಬ ತಪ್ಪು ಅಭಿಪ್ರಾಯವನ್ನು ಬಿಟ್ಟು, ವರ್ಣಕಕಾವ್ಯಗಳನ್ನು ಬರೆದರೂ ಸತ್ತ್ವದಿಂದ ಮಹಾಕವಿಯಾಗುವರೆಂದು ಭಾವಿಸುವುದಾದರೆ ಸೋಮನಾಥ ತೆಲುಗಿನ ಪ್ರಾಚೀನ ಮಹಾಕವಿಗಳಲ್ಲಿ ಒಬ್ಬ ನಾಗುತ್ತಾನೆ. 'ನಡೆಯುವ ವಿಶ್ವಕೋಶ'ವೆಂದು ಕೆಲವರ ಬಗೆಗೆ ಹೇಳುವುದುಂಟು. ಸೋಮನಾಥನನ್ನು 'ಬರೆಯುವ ವಿಶ್ವ ಕೋಶ'ವೆಂದರೆ ತಪ್ಪಾಗಲಾರದು. ಪಿಡುಪರ್ತಿ ಬಸವನ್ನ ಎಂಬ ತೆಲುಗು ಕವಿ ಪಾಲ್ಕುರಿಕೆ ಸೋಮನಾಥನನ್ನು ಕುರಿತು ಹೇಳಿದ ಈ ಕೆಳಗಿನ ಮಾತುಗಳು ಸಾರ್ಥಕವಾದಂಥವು.

"ಲಿಪಿಲಿಖಿಂಪಕ ಮುನ್ನೆಯಪರಿಮಿತಾರ್ಥೋಕ್ತಿ
ಶಕ್ತಿಯಾತನಿ ಜಿಹ್ವ ಜರುಗುಚುಂಡು
ಛಂದೋಧಿಕರಣಾದಿ ಸರಣಿ ಚೂಡಕಮುನ್ನ
ಮದಿನುಂಡು ಕಾವ್ಯನಿರ್ಮಾಣಶಕ್ತಿ
ಭಾಷ್ಯ ಸಂಗತುಲು ಚೆಪ್ಪಕಚೂಡಕ ಮುನ್ನ
ರುದ್ರಭಾಷ್ಯಕ್ರಿಯಾರೂಢಿವೆಲಯು
ತರ್ಕಶಾಸ್ತ್ರಾದಿ ವಿದ್ಯಲು ಪಠಿಂಪಕಮುನ್ನ
ಪರಪಕ್ಷನಿಗ್ರಹಪ್ರೌಢಿವೆಲಯು........."

(ಲಿಪಿಯ ರೂಪದಲ್ಲಿ ಬರೆಯುವ ಮೊದಲೇ ಅಪರಿಮಿತವಾದ ಅರ್ಥೋಕ್ತಿಯ ಶಕ್ತಿ ಆತನ ನಾಲಗೆಯಲ್ಲಿರುತ್ತದೆ. ಛಂದೋಧಿ ಕರಣಗಳನ್ನು ನೋಡುವ ಮೊದಲೇ ಆತನ ಮನಸ್ಸಿನಲ್ಲಿ ಕಾವ್ಯ ನಿರ್ಮಾಣಶಕ್ತಿ ಇರುತ್ತದೆ. ಭಾಷ್ಯ ಸಂಗತಿಗಳನ್ನು ಹೇಳುವ.

ನೋಡುವ ಮೊದಲೇ ಪರಪಕ್ಷದವರನ್ನು ಸೋಲಿಸುವ ಪ್ರೌಢ ಗುಣ ತುಂಬಿರುತ್ತದೆ.)

ಸರ್ವತೋಮುಖ ಪಾಂಡಿತ್ಯವಿರುವ ಪಾಲ್ಕುರಿಕೆ ಸೋಮನಾಥನಿಗೆ 'ತತ್ತ್ವ ವಿದ್ಯಾ ಕಲಾಪಕವಿತಾವಿಚಾರ,' 'ಅನ್ಯವಾದ ಕೋಲಾಹಲ,' 'ಪ್ರತ್ಯಕ್ಷ ಭೃಂಗೀಶಾವತಾರ ಎಂಬ ಬಿರುದುಗಳಿದ್ದವಂತೆ. ಚತುರ್ವೇದಗಳು, ಸರ್ವಶಾಸ್ತ್ರಗಳು, ಅಷ್ಟಾದಶ ಪುರಾಣ, ಕಾವ್ಯ, ನಾಟಕಾಲಂಕಾರಗಳ ಅಭ್ಯಾಸ ಬಲದಿಂದ ಸೋಮನಾಥ ಅಪೂರ್ವ ವ್ಯಕ್ತಿಯಾಗಿದ್ದನು. ಅನೇಕ ಭಾಷೆಗಳನ್ನು, ವಿವಿಧ ದೇಶಗಳ ಆಚಾರಗಳನ್ನು, ವೇಷ ಭೂಷಣಾಲಂಕಾರಗಳನ್ನು ಸೋಮನಾಥ ತಿಳಿದಿದ್ದನು.

ಭಾಷೆಯ ದೃಷ್ಟಿಯಿಂದ ನೋಡಿದಾಗ ತೆಲುಗು ಭಾಷೆಗೆ ಸೋಮನಾಥನಿಂದಾದ ಸಹಾಯ ಅಷ್ಟಿಷ್ಟಲ್ಲ. ಜನಪದ ಗೀತೆಗಳಲ್ಲಿ ಹೆಚ್ಚಾಗಿ ಸಿಕ್ಕುವ ದ್ವಿಪದಿ ಎಂಬ ದೇಸಿ ಛಂದಸ್ಸಿಗೆ ಕಾವ್ಯ ಗೌರವವನ್ನು ಕೊಟ್ಟವನು ಸೋಮನಾಥನೇ. ಈತನು ಬರೆದ 'ಬಸವಪುರಾಣ'ಮತ್ತು 'ಪಂಡಿತಾರಾಧ್ಯಚರಿತ್ರ' ಒಳಗೊಂಡಿರುವ ವಿಷಯಗಳ ಹರವು ಬೆರಗನ್ನುಂಟುಮಾಡುತ್ತದೆ. ಮುಖ್ಯವಾಗಿ 'ಪಂಡಿತಾರಾಧ್ಯಚರಿತ್ರೆ' ಒಂದು ವಿಶ್ವಕೋಶ. ಜಾನಪದ ವಿದ್ವಾಂಸರಿಂದ ಹಿಡಿದು ಛಂದೋವ್ಯಾಕರಣಾದಿ ಶಾಸ್ತ್ರಕಾರರವರೆಗೆ ಈ ಗ್ರಂಥದಲ್ಲಿ ಕುತೂಹಲ ಕೆರಳಿಸುವ ಅನೇಕ ವಿಷಯಗಳಿವೆ. ಅಪೂರ್ವವಾದ ತೆಲುಗು ಭಾಷಾ ಪದಗಳು ಹೇರಳವಾಗಿ ಸಿಕ್ಕುವ 'ಪಂಡಿತಾರಾಧ್ಯ ಚರಿತ್ರ' ನಿಘಂಟುಕಾರರಿಗೆ, ಭಾಷಾ ವಿಜ್ಞಾನಿಗಳಿಗೆ –ಉತ್ತಮ ಆಕರ ಗ್ರಂಥವಾಗಬಲ್ಲುದು.

ಸೋಮನಾಥನಿಗಿದ್ದ ವೈದುಷ್ಯ ಒಂದೊಂದುಸಾರಿ ಅವನ ಆಶಯಗಳಿಗೆ ಪ್ರತಿಬಂಧಕವಾಯಿತೆಂದು ಹೇಳಬಹುದು. ಸಂಸ್ಕೃತ

ದಲ್ಲಿ ಅವನಿಗಿದ್ದ ಆಳವಾದ ಪಾಂಡಿತ್ಯ, ಪದಜ್ಞಾನ, ಪ್ರೌಢತೆ ದೇಶೀಯ ಛಂದಸ್ಸಿನಲ್ಲೂ ಸಂಸ್ಕೃತ ಸಮಾಸಗಳನ್ನು ತುಂಬುವಂತೆ ಮಾಡಿವೆ. ಸಾಮಾನ್ಯಜನರಿಗೆ ತನ್ನ ಆಶಯಗಳನ್ನು ತಲುಪಿಸು ಬೇಕೆಂದು ಹೊರಟ ಪಾಲ್ಕುರಿಕೆ ಸೋಮನಾಥನಿಗೆ, ತನ್ನ ಪಾಂಡಿತ್ಯಾವೇಶವನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ಆದರೆ 'ಬಸವಪುರಾಣ' ಮತ್ತು 'ಪಂಡಿತಾರಾಧ್ಯ ಚರಿತ್ರೆ' ಅನೇಕ ವಿಷಯಗಳಲ್ಲಿ ಸ್ವತಂತ್ರವಾಗಿದ್ದು, ಸೋಮನಾಥನನ್ನು ಪ್ರತ್ಯೇಕ ಕವಿಯನ್ನಾಗಿಸಿವೆ.

ಸಾಹಿತ್ಯವನ್ನು ಧರ್ಮಪ್ರಚಾರಕ್ಕಾಗಿ ಬಳಸುವುದು, ದೇಶೀಯ ಕಥಾವಸ್ತುವಿಗೆ ದೇಶೀಯ ಛಂದಸ್ಸಿಗೆ ಮಾನ್ಯತೆಯನ್ನು ಕೊಡುವುದು ಪಾಲ್ಕುರಿಕೆ ಸೋಮನಾಥನ ಮುಖ್ಯ ಧೋರಣೆ ಯಾಗಿದೆ. ಹೊಸದನ್ನು ಕೂಡಲೇ ಸ್ವೀಕರಿಸುವ ಪ್ರವೃತ್ತಿಯಿಲ್ಲದ ಸಂಪ್ರದಾಯಸ್ಥರಿಗೆ ಸೋಮನಾಥನಂತಹವರ ಹೊಸ ಧೋರಣೆ ಗಳು ಹಿಡಿಸವು. ಸೋಮನಾಥನಿಗೆ ಸಮಕಾಲೀನರಿಂದ ಮನ್ನಣೆ ದೊರೆಯಲಿಲ್ಲ. ಆದರೂ ಅವನದೇ ಒಂದು ವಿಧವಾದ ಸಾಹಿತ್ಯ ಕ್ರಾಂತಿ ಎಂಬುದೇನೋ ನಿಜ.

ತೆಲುಗಿನ ಮಹಾಕಾವ್ಯ ಪರಂಪರೆ ನನ್ನಯ (೧೧ನೆಯ ಶ.) ನಿಂದ ಪ್ರಾರಂಭವಾಯಿತು. ಪಂಪ ಮೊದಲಾದ ಕನ್ನಡ ಕವಿ ಗಳಂತೆಯೇ 'ಮಾರ್ಗ' ಅಭಿಮಾನಿಯಾದ ನನ್ನಯ, ಚಂಪೂ ಮಾರ್ಗವನ್ನು ಹಿಡಿದು ತೆಲುಗು ಸಾಹಿತ್ಯಕ್ಕೆ ಒಂದು ದಾರಿಯನ್ನು ಏರ್ಪಡಿಸಿದ. ತೆಲುಗಿನ ಅನೇಕ ಕವಿಗಳು ಅದೇ ಮಾರ್ಗವನ್ನು ಹಿಡಿದು ಸಾಗಿದರು. ಶೈವ ಕವಿಗಳು ಬೇರೊಂದು ಮಾರ್ಗವನ್ನು ತೋರಿಸಿಕೊಟ್ಟರೂ ಸಾಹಿತಿಗಳಿಗೆ ಅದು ಹಿಡಿಸಲಿಲ್ಲ. 'ಬಸವ ಪುರಾಣ'ದಲ್ಲಿ ಸೋಮನಾಥನು ಹೇಳಿರುವ ಈ ಮಾತುಗಳು

ನಾಡು-ನುಡಿಯ ಮೇಲೆ ಅಭಿಮಾನವಿರುವ ಯಾರಿಗಾದರೂ ಹಿಡಿಸದಿರವು.

"ಉರುತರ ಗದ್ಯ ಪದ್ಯೋಕ್ತುಲಕಂಟೆ
ಸರಸಮೈ ಪರಗಿನ ಜಾನು ತೆನುಂಗು
ಚರ್ಚಿಂಪಗಾ ಸರ್ವ ಸಾಮಾನ್ಯ ಮಗುಟ
ಕೂರ್ಚಿವ ದ್ವಿಪದಲು ಕೋರ್ಕಿ ದೈವಾರ
ತೆಲುಗು ಮಾಟಲನಂಗ ವಲದು, ವೇದಮುಲ
ಕೊಲದಿಯಗಾ ಚೂಡು ಡಿಲ ನೆಟ್ಟುಲನಿನ" (ಪು.೧)

(ಉರುತರ ಗದ್ಯ ಪದ್ಯೋಕ್ತಿಗಳಿಗಿಂತ ಸರಸವಾಗಿ ಮೆರೆಯುವ ಜಾನುತೆನುಗು, ಎಂದರೆ ಜಾಣತನದ ತೆಲುಗು, ಸರ್ವಸಾಮಾನ್ಯ ವಾದುದಾದ್ದರಿಂದ ದ್ವಿಪದಿಗಳನ್ನು ಬರೆಯುವೆನು. ಇವು ತೆಲುಗು ಮಾತುಗಳೆನ್ನಬೇಡಿ, ವೇದಗಳೆಂದು ತಿಳಿದುಕೊಳ್ಳಿ)

'ಪಂಡಿತಾರಾಧ್ಯ ಚರಿತ್ರ'ದಲ್ಲೂ ಪಾಲ್ಕುರಿಕೆ ಸೋಮನಾಥ ಇದೇ ರೀತಿ ಹೇಳುತ್ತಾನೆ. "ಗದ್ಯ ಪದ್ಯಾದಿ ಪ್ರಬಂಧಪೂರಿತ ಸಂಸ್ಕೃತ ಭೂಯಿಷ್ಠ ರಚನೆ ಸಾಮಾನ್ಯವಲ್ಲದ್ದರಿಂದ, ವಿಶೇಷವಾಗಿ ಪ್ರಸನ್ನವಾಗಿರುವ ಜಾನು ತೆಲುಗಿನಲ್ಲಿ" ಬರೆಯುವುದಾಗಿ ಸೋಮನಾಥ ಹೇಳಿದ್ದಾನೆ.

ದೇಶೀಯ ಛಂದಸ್ಸಿನಲ್ಲಿ, ದೇಶೀಯ ಕಥಾವಸ್ತುವನ್ನು ಸ್ವೀಕರಿಸಿ ಬರೆದ ಮಾತ್ರಕ್ಕೆ ತಾನು ಪಾಮರಕವಿ ಎಂದು ಭಾವಿಸ ಬಾರದೆಂಬುದು ಸೋಮನಾಥನ ಆಶಯ. "ಸತ್ಕೃತಿಯಲ್ಲಿ ಹೊಸ ವಿಷಯಗಳಿರಬೇಕು; ಒಂಬತ್ತು ರಸಗಳು ತುಂಬಿ ತುಳುಕಾಡ ಬೇಕು; ಅದಕ್ಕೆರಡು ಮಡಿ (೧೮) ವರ್ಣನೆಗಳಿರಬೇಕು; ಅದಕ್ಕೆರಡು ಮಡಿ (೩೬) ಅಲಂಕಾರಗಳಿರಬೇಕು; ಅದಕ್ಕೆರಡರಷ್ಟು ಅರ್ಥ ಭಾವಗಳು ಮೆರೆಯಬೇಕು" ಎಂದು ಸೋಮನಾಥ ಪಂಡಿತಾ

ರಾಧ್ಯ ಚರಿತ್ರ'ದಲ್ಲಿ ಹೇಳಿದ್ದಾನೆ. ಕಾವ್ಯಧೋರಣೆಯ ಬಗೆಗೆ ಈತ ಹೇಳಿದ ಮಾತುಗಳಲ್ಲಿ ತುಂಬ ಮುಖ್ಯವಾದುವು:

"ಅಲ್ಪಾಕ್ಷರಮುಲನನಲ್ಪಾರ್ಥ ರಚನ
ಕಲ್ಪಿಂಚುಟಯೆ ಕಾದೆ ಕವಿ ವಿವೇಕಂಬು" ಎಂಬುವು

(ಅಲ್ಪಾಕ್ಷರಗಳಲ್ಲಿ ಅನಲ್ಪಾರ್ಥ ರಚನೆ
ಮಾಡುವುದೇ ಅಲ್ಲವೆ ಕವಿಯ ವಿವೇಕ)

ಆಶಯವೇನೋ ಮಹತ್ತ್ವದ್ದಾಗಿದೆ; ದುರದೃಷ್ಟವೆಂದರೆ ಸೋಮನಾಥನ ರಚನೆಯಲ್ಲಿ ಅಲ್ಪಾರ್ಥಕ್ಕೆ ಅನಲ್ಪಾಕ್ಷರಗಳನ್ನು ಬಳಸಿದ್ದನ್ನೇ ಹೆಚ್ಚಾಗಿ ಕಾಣುತ್ತೇವೆ. ಅವನದು ವರ್ಣನಾತ್ಮಕ ಶೈಲಿ. ವ್ಯಂಗ್ಯ ಕಡಮೆ. ವಾಚ್ಯ ಹೆಚ್ಚು. ಆದರೆ ವಿಷಯಗಳ ಹರವು ಬೆರಗನ್ನುಂಟುಮಾಡುವಂಥದು. ಕವಿಯ ಲೋಕಜ್ಞಾನ ಶಾಸ್ತ್ರಜ್ಞಾನ ಅಚ್ಚರಿಯನ್ನುಂಟು ಮಾಡುವಂಥದು.

ಸೋಮನಾಥನ ಕೃತಿಗಳ ವೈವಿಧ್ಯ

ಸೋಮನಾಥನ ಪ್ರೌಢಿಮೆಗೆ ತಕ್ಕಂತೆ ಅವನ ರಚನೆಗಳಲ್ಲಿಯೂ ವೈವಿಧ್ಯ ಕಂಡುಬರುತ್ತದೆ. ತೆಲುಗು, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಸೋಮನಾಥನ ರಚನೆಗಳಿವೆ. ತೆಲುಗಿನಲ್ಲಿ ಅವನು ಬರೆದ 'ಬಸವ ಪುರಾಣ' ಮತ್ತು ಪಂಡಿತಾರಾಧ್ಯ ಚರಿತ್ರ' ದ್ವಿಪದಿ ಛಂದಸ್ಸಿನ ಕೃತಿಗಳು. ದ್ವಿಪದಿ ಕನ್ನಡದ ತ್ರಿಪದಿಗೆ ಹತ್ತಿರವಾದ ಅಚ್ಚ ತೆಲುಗು ಛಂದಸ್ಸು. ಇದು ರಗಳೆಯಂತೆ ಪಾದ ನಿಯಮವಿಲ್ಲದೆ ಓಡುವ ಛಂದಸ್ಸು. ಅಂಶಗಣದ ಈ ಛಂದಸ್ಸಿನ ಸಾಹಿತ್ಯ ತೆಲುಗಿನಲ್ಲಿ ಪ್ರತ್ಯೇಕವಾಗಿ ಬೆಳೆಯಲು ಸೋಮನಾಥ ಮುಖ್ಯ ಕಾರಣ.

'ಅನುಭವಸಾರಮು' ಎಂಬ ಗ್ರಂಥದಲ್ಲಿ ಅನೇಕ ಪ್ರಸಿದ್ಧ ವೃತ್ತಗಳನ್ನು ಮಾತ್ರವಲ್ಲದೆ, ಮಾಲಿನಿ, ವನಮಯೂರ, ಕೌಂಚ ಪದ ಮುಂತಾದ ವೃತ್ತಗಳನ್ನೂ ಸೋಮನಾಥ ಬಳಸಿದ್ದಾನೆ. ಈ ಕವಿಯ 'ಚತುರ್ವೇದಸಾರಮು' ತೆಲುಗಿನ ಪ್ರಸಿದ್ಧ ಛಂದಸ್ಸಾದ ಸೀಸದಲ್ಲಿ ಬರೆದ ಕಾವ್ಯ. 'ವೃಷಾಧಿಪಶತಕ' ತೆಲುಗಿನ ಶತಕಸಾಹಿತ್ಯದ ಪ್ರಾರಂಭ ಕಾಲದ ಒಂದು ಕೃತಿ.

'ಉದಾಹರಣ'ವೆಂಬ ವಿಶಿಷ್ಟ ಕಾವ್ಯ ಪ್ರಕಾರವನ್ನು ಬಳಕೆಗೆ ತಂದವನು ಪಾಲ್ಕುರಿಕೆ ಸೋಮನಾಥನೇ . ಪದ್ಯಗಳು, ಕಳಿಕೆ, ಉತ್ಕಳಿಕೆ ಎಂಬ ರಗಳೆಯ ಪದ್ಯಗಳು ಒಂದೊಂದು ವಿಭಕ್ತಿ ಯಲ್ಲಿರುವ ಸ್ತುತಿಕಾವ್ಯ ಉದಾಹರಣ. ತೆಲುಗು ಮತ್ತು ಸಂಸ್ಕೃತಗಳಲ್ಲಿ 'ಬಸವೋದಾಹರಣ'ವನ್ನು ಸೋಮನಾಥ ಬರೆದಿದ್ದಾನೆ.

ಕನ್ನಡವಲ್ಲಿ 'ಗಣಸಹಸ್ರನಾಮ,' 'ಬಸವರಗಳೆ,' ಪಂಚಪ್ರಕಾರ ಗದ್ಯಗಳು ಮುಂತಾದುವು ಸೋಮನಾಥನ ರಚನೆಗಳು. ಪಾಲ್ಕುರಿಕೆ ಸೋಮನಾಥನ ಕನ್ನಡ ಕೃತಿಗಳ ಬಗೆಗೆ ಕೆಲವು ಸಮಸ್ಯೆ ಗಳಿವೆ. 'ಅನ್ಯವಾದಕೋಲಾಹಲ' ಎಂಬುದು ಸೋಮನಾಥನ ದೆಂದು ಕವಿಚರಿತೆಕಾರರು ಬರೆದಿದ್ದಾರೆ. ಆದರೆ ಈ ಕೃತಿ ಸೋಮ ನಾಥನ ಶಿಷ್ಯನದೇ ಹೊರತು ಅವನದಲ್ಲ. 'ಸೋಮೇಶ್ವರಶತಕ' ಸೋಮನಾಥನದೆಂದು ಕೆಲವರು ಭಾವಿಸಿದ್ದರು. ಅದು ಪುಲಿಗೆರೆಯ ಸೋಮನದೆಂದು ಈಗ ಸ್ಥಾಪಿತವಾಗಿದೆ.

ಪಿಡುಪರ್ತಿ ಸೋಮನಾಥನೆಂಬವನು ಪಾಲ್ಕುರಿಕೆ ಸೋಮ ನಾಥನ ದ್ವಿಪದಿ ಬಸವಪುರಾಣವನ್ನು ಚಂಪೂರೂಪದಲ್ಲಿ ಪುನರ್ರಚಿಸಿದ್ದಾನೆ. ಅದರ ಪೀಠಿಕಾಭಾಗದಲ್ಲಿ ಪಾಲ್ಕುರಿಕೆ ಸೋಮ ನಾಥನ ಎಲ್ಲ ಗ್ರಂಥಗಳನ್ನೂ ಒಂದು ಪದ್ಯದಲ್ಲಿ ಪಟ್ಟಿ ಮಾಡ ಲಾಗಿದೆ.

"ಬಸವ ಪುರಾಣಂಬು. ಪಂಡಿತಾರಾಧ್ಯುಲ
ಚರಿತಂಬು. ನನುಭವಸಾರಮುನು. ಚ
ತುರ್ವೇದ ಸಾರಸೂಕ್ತುಲು. ಸೋಮನಾಥ ಭಾ
ಷ್ಯಮ್ಮು. ಶ್ರೀರುದ್ರ ಭಾಷ್ಯಂಬು. ಬಸವ
ರಗಡ. ಗಂಗೋತ್ಪತ್ತಿರಗಡ. ಶ್ರೀ ಬಸವಾಢ್ಯ
ರಗಡಮು, ಸದ್ಗುರುರಗಡ, ಚೆನ್ನ
ಮಲ್ಲುರಗಡ ಸೀಸಮುಲು. ನಮಸ್ಕಾರ ಗದ್ಯ
ವೃಷಾಧಿಪ ಶತಕಂಬು. ನಕ್ಷರಾಂಕ
ಗದ್ಯಪದ್ಯಮುಲ್. ಪಂಚಪ್ರಕಾರ ಗದ್ಯ
ಯುಕ್ತಕಮು. ಪಂಚಕಮು. ನುದಾಹರಣಯುಗಮು.
ನಾದಿಯಗು ಕೃತುಲ್ ಭಕ್ತಹಿತಾರ್ಥ ಬುದ್ಧಿ
ಚೆಪ್ಪಿನನಿ ಭಕ್ತ ಸಭಲಲೋ ಚೆಲ್ಲುಚುಂಡು"

ಬಸವ ಪುರಾಣ

ಪಾಲ್ಕುರಿಕೆ ಸೋಮನಾಥನ ಹೆಸರನ್ನು ಸ್ಮರಿಸಿದ ಕೂಡಲೇ ನೆನಪಿಗೆ ಬರುವ ಗ್ರಂಥ 'ಬಸವಪುರಾಣ'. ತೆಲುಗು ಭಾಷೆಯಿಂದ ಬೇರೆ ಭಾಷೆಗಳಿಗೆ ಅನುವಾದಗೊಂಡ ಮೊಟ್ಟಮೊದಲ ಕಾವ್ಯ ಇದು. ಕನ್ನಡ, ತಮಿಳು ಮತ್ತು ಸಂಸ್ಕೃತಗಳಲ್ಲಿ 'ಬಸವಪುರಾಣ'ದ ಅನುವಾದಗಳಿವೆ. ಕನ್ನಡ ಬಸವಪುರಾಣ ಅನಂತರ ಕಾಲದ ಶೈವಗ್ರಂಥಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಕನ್ನಡ ನಾಡಿನ ಬಸವೇಶ್ವರನ ಚರಿತ್ರೆಯ ಜೊತೆಗೆ ತಮಿಳುನಾಡಿನ ನಾಯನ್ಮಾರರ ಕಥೆಗಳನ್ನು 'ಕರಿಮಣಿಗಳೊಳಗಿನ ದಾರದಂತೆ' ಸೇರಿಸಿ ಬರೆದು, ದಕ್ಷಿಣ ಭಾರತದ ಏಕತೆಯ ಪ್ರತಿನಿಧಿಯಾದ ಸೋಮನಾಥ. ಈತನ ಕಾಲದಲ್ಲಿ ಬಸವೇಶ್ವರ ಮತ್ತು ಇತರ ಪುರಾತನರನ್ನು ಕುರಿತ ಗೀತೆಗಳನ್ನು ಭಕ್ತರು ಹಾಡುತ್ತಿದ್ದರು. ತನ್ನ 'ಬಸವಪುರಾಣ'ಕ್ಕೆ ಅವೇ ಮೂಲವೆಂದು ಸೋಮನಾಥ ಹೇಳಿದ್ದಾನೆ.

"ಆತತ ಬಸವ ಪುರಾತನ ಭಕ್ತ
ಗೀತಾರ್ಥ ಸಮಿತಿಯೇ ಮಾತೃಕಗಾಗ
ಪೂರಿತಂಬೈಯೊಪ್ಪ ಪೂಸಲಲೋನಿ
ದಾರಂಬುಕ್ರಿಯು ಪುರಾತನ ಭಕ್ತದಿತತಿ
ಚರಿತಲಲೋಪಲಿ ಸಂಧಿಲ್ಲ ಬಸವ
ಚರಿತಮೇ ವರ್ಣಿಂತು ಸತ್ಕೃತಿಯುನಗ"

(ಬಸವ ಪುರಾತನ ಭಕ್ತಗೀತಾರ್ಥ ಸಮಿತಿಯೇ ಮಾತೃಕೆಯಾಗಲು, ಕರಿಮಣಿಗಳೊಳಗಿನ ದಾರದಂತೆ ಪುರಾತನ ಭಕ್ತ ಸಮೂಹದ ಕತೆಗಳು ಒಳಗೆ ಸೇರಿರಲು ಬಸವ ಚರಿತೆಯನ್ನು ಸತ್ಕೃತಿಯಾಗುವಂತೆ ವರ್ಣಿಸುತ್ತೇನೆ).

ಸಕಲ ಪುರಾತನರನ್ನು ಕುರಿತ ಜನಪದಗೀತೆಗಳು ಸೋಮನಾಥನ ಕಾಲದಲ್ಲೂ ಹೇರಳವಾಗಿದ್ದಿರಬೇಕು; ಇಂದಿಗೂ ಇವೆ. ಇಂಥದೊಂದು ಜನಪದ ಬಸವಪುರಾಣ ಇತ್ತೀಚೆಗೆ ಪ್ರಕಟವಾಗಿರುವುದು ಗಮನಾರ್ಹ (ಕನ್ನಡ ಸಾಹಿತ್ಯ ಪರಿಷತ್ತು, ೧೯೮೧, ಸಂ. ಪಿ.ಕೆ. ರಾಜಶೇಖರ).

ಪಾಲ್ಕುರಿಕೆ ಸೋಮನಾಥನ 'ಬಸವಪುರಾಣ' ಅನೇಕ ವಿಧದಲ್ಲಿ ಅಪೂರ್ವವಾದಗ್ರಂಥ. ತೆಲುಗು ಸಾಹಿತ್ಯ ಕಾವ್ಯ-ನಾಟಕ-ಲಕ್ಷಣ ಮುಂತಾದ ಎಲ್ಲ ವಿಷಯಗಳಲ್ಲಿಯೂ ಸಂಸ್ಕೃತದ ಮೇಲೆ ಆಧಾರಗೊಂಡಿದೆ. ತೆಲುಗಿನ ಆದಿಕವಿ ಎನಿಸಿಕೊಂಡ ನನ್ನಯ (೧೧ನೆಯ ಶ.) ಸಂಸ್ಕೃತ ಭಾರತವನ್ನು ಅನುವಾದ ಮಾಡಿದನು. ಅವನಿಗಿಂತ ಮೊದಲೇ ಕೆಲವು ಶತಮಾನಗಳಿಂದ ಪ್ರಚಾರದಲ್ಲಿದ್ದ ಜನಪದ ಸಾಹಿತ್ಯ ಪಂಡಿತ ಜನರ ತಿರಸ್ಕಾರಕ್ಕೆ ಗುರಿಯಾಗಿ ಕಾಲಗರ್ಭದಲ್ಲೇ ಕಳೆದುಹೋಯಿತು. ನನ್ನಯ ಪ್ರೌಢ ಶೈಲಿಯಲ್ಲಿ, ಚಂಪೂ ರೀತಿಯಲ್ಲಿ ಸಂಸ್ಕೃತ ಮೂಲದ ಕಥಾವಸ್ತುವನ್ನು ಸ್ವೀಕರಿಸಿ ಮಹಾಕಾವ್ಯವನ್ನು ಬರೆದ ಮೇಲೆ ತೆಲುಗಿನ ಕವಿಗಳಿಗೆ ಅದೇ

ಆದರ್ಶವಾಯಿತು. ಈ ಮಾರ್ಗವನ್ನು ಜೇರಡೆಗೆ ತಿರುಗಿಸ ಬೇಕೆಂದು ಪ್ರಯತ್ನಿಸಿದವರು ಶಿವಕವಿಗಳು; ಅವರಲ್ಲಿ ಅಗ್ರಮಾನ್ಯ ನಾದವನು ಪಾಲ್ಕುರಿಕೆ ಸೋಮನಾಥ. ಈತ ಅನುಸರಿಸಿದ ದೇಶೀಯ ಮಾರ್ಗವನ್ನೇ ಅನಂತರಕಾಲದ ಕವಿಗಳು ಹಿಡಿದಿದ್ದರೆ ತೆಲುಗಿನಲ್ಲಿ ಸ್ವತಂತ್ರರೀತಿಯ ಸಾಹಿತ್ಯ ಗಣನೀಯವಾಗಿ ಬೆಳೆಯು ತ್ತಿತ್ತು.

'ಬಸವ ಪುರಾಣ'ದ ಕಥಾವಸ್ತು ಹೀಗಿದೆ: ನಾರದ ಕೈಲಾಸಕ್ಕೆ ಹೋಗಿ ಶಿವನಿಗೆ ಭೂಲೋಕದ ವಿಷಯವನ್ನು ತಿಳಿಸು ತ್ತಾನೆ. ಶಿವನು ನಂದಿಕೇಶ್ವರನನ್ನು ಬಸವನಾಗಿ ಹುಟ್ಟಲು ಕಳುಹಿಸುತ್ತಾನೆ. ಭೂಲೋಕದಲ್ಲಿ ಜನಿಸಿದ ಬಸವ ಉಪನಯನ ವನ್ನು ತಿರಸ್ಕರಿಸುತ್ತಾನೆ. ಕಪ್ಪಡಿ ಸಂಗಮೇಶ್ವರದಲ್ಲಿ ಅವನಿಗೆ ಈಶ್ವರ ಸಾಕ್ಷಾತ್ಕಾರ ಲಭಿಸುತ್ತದೆ. ಅನಂತರ ಅವನು ಬಿಜ್ಜಳನಿಗೆ ಭಂಡಾರಿಯಾಗುತ್ತಾನೆ. ಬಸವ ಅನೇಕ ಪವಾಡಗಳನ್ನು ಮೆರೆಯು ತ್ತಾನೆ. ಶಿವನು ತನ್ನ ಹೃದಯದಲ್ಲಿ ಬಸವನನ್ನು ತೋರಿಸಿ ಅವನ ಮಹಿಮೆಯನ್ನು ಪಾರ್ವತಿಗೆ ವರ್ಣಿಸಿ ಹೇಳುತ್ತಾನೆ.

ಬಸವಪುರಾಣದ ಮೂರನೆಯ ಆಶ್ವಾಸದಿಂದ ಹಲವಾರು ಭಕ್ತರ ಕಥೆಗಳು ಕಂಡುಬರುತ್ತವೆ. ರುದ್ರ ಪಶುಪತಿ, ಬೆಜ್ಜ ಮಹಾದೇವಿ, ಗೊಡಗೂಚಿ, ಕಣ್ಣಪ್ಪ, ಮಡಿವಾಳ ಮಾಚಯ್ಯ, ಸಿರಿಯಾಳ, ನಿಮ್ಮವ್ವ, ಕುಮ್ಮರಗುಂಡಯ್ಯ, ಪೂಸಲ ನಾಯ ನಾರ್, ಕಿನ್ನರಬ್ರಹ್ಮಯ್ಯ, ಕನ್ನಡ ಬ್ರಹ್ಮಯ್ಯ, ಏಕಾಂತರಾಮಯ್ಯ, ಶಿವಲೆಂಕ ಮಂಚಯ್ಯ, ಮಧುವಯ್ಯ, ಭೋಗಯ್ಯ, ಕಕ್ಕಯ್ಯ ಮುಂತಾದ ಭಕ್ತರ ಜೀವನದಿಂದ ಆರಿಸಿದ ಸ್ವಾರಸ್ಯಕರವಾದ ಪ್ರಸಂಗಗಳನ್ನು ಕವಿ ವರ್ಣಿಸಿದ್ದಾನೆ. ಕೊನೆಯ ಆಶ್ವಾಸದಲ್ಲಿ ಮತ್ತೆ ಬಸವೇಶ್ವರನ ಜೀವನದ ಕೆಲವು ಮುಖ್ಯ ಸಂದರ್ಭಗಳನ್ನು ಕವಿ

ವರ್ಣಿಸಿದ್ದಾನೆ. ಬಸವ ವಿಷವನ್ನು ನುಂಗುವುದು, ಬಿಜ್ಜಲ ನೊಂದಿಗೆ ಜಗಳ, ನಿರ್ಯಾಣ ಅಂಥವುಗಳಲ್ಲಿ ಕೆಲವು.

ಸೋಮನಾಥ ತನ್ನ ಕಾವ್ಯವನ್ನು ರಚಿಸುವಲ್ಲಿ ತೋರಿದ ಜಾಣ್ಮೆ, ಸ್ವಾತಂತ್ರ್ಯ, ಪ್ರತಿಭೆ ಬೆರಗನ್ನುಂಟುಮಾಡುತ್ತವೆ. ಅವನ ಕಾಲಕ್ಕೆ ಪುರಾಣಕಥೆಗಳಿಗೆ ಮಾನ್ಯತೆ ಹೆಚ್ಚಾಗಿತ್ತು. ನನ್ನಯನ ಭಾರತ ಆಂಧ್ರದಾದ್ಯಂತ ಪ್ರಸಿದ್ಧವಾಗಿತ್ತು. ಐತಿಹಾಸಿಕ ವ್ಯಕ್ತಿ ಯಾದ ಬಸವೇಶ್ವರ ಚರಿತ್ರೆಯನ್ನು ನಿರೂಪಿಸುವಲ್ಲಿ, ಕಾವ್ಯ ನಾಯಕನನ್ನು ಪುರಾಣ ಪುರುಷನನ್ನಾಗಿ ಮಾಡಿ, ಅನೇಕ ಪವಾಡ ಗಳನ್ನು ಸೇರಿಸಿ, ಬಸವನಿಗೂ ಅವನ ವೀರಶೈವಧರ್ಮಕ್ಕೂ ಜನ ಪ್ರಿಯತೆಯನ್ನು ಗಳಿಸಿಕೊಡಲು ಸೋಮನಾಥ ಮಾಡಿದ ಯತ್ನ ಗಮನಾರ್ಹವಾದುದು. ಈ ಪ್ರಯತ್ನಕ್ಕೆ ಪೋಷಕವಾಗುವಂತೆ ತೆಲಗು, ಕನ್ನಡ, ತಮಿಳು ನಾಡುಗಳಿಗೆ ಸೇರಿದ ಪುರಾತನ ಭಕ್ತರ ಕಥೆಗಳನ್ನೂ ಸೇರಿಸಿ, ನಿಜವಾದ ಭಕ್ತನಿಗಿಂತ ಮಿಗಿಲಾದವರಿಲ್ಲ ಎಂಬುದನ್ನು ಕವಿ ಸಾರಿದ್ದಾನೆ.

ಬಸವೇಶ್ವರನನ್ನು ಕುರಿತ ಕಥೆಗಳನ್ನೂ, ಇತರ ಪುರಾತನ ಭಕ್ತರ ಕಥೆಗಳನ್ನೂ ಸೋಮನಾಥ ಅವರಿವರಿಂದ ಕೇಳಿದ್ದಿರಬೇಕು. ಆ ಕಾಲದಲ್ಲಿ ಅಂಥ ಭಕ್ತಿಗೀತೆಗಳು ಶ್ರೀಶೈಲ ಮುಂತಾದ ಪವಿತ್ರ ಸ್ಥಳಗಳಲ್ಲಿ ಪ್ರಚಲಿತವಾಗಿದ್ದವು. ಸೋಮನಾಥ ಆಂಧ್ರದಲ್ಲಿದುದ ರಿಂದ ಅವನಿಗೆ ಬಸವಣ್ಣನ ಬಗೆಗಾಗಲಿ, ತಮಿಳುನಾಡಿನ ನಾಯನ್ಮಾರರ ಬಗೆಗಾಗಲಿ ಪ್ರತ್ಯಕ್ಷವಾಗಿ ತಿಳಿದುಕೊಳ್ಳಲು ಸಾಧ್ಯ ವಾಗಲಿಲ್ಲ. ಹರಿಹರನ 'ಬಸವರಾಜದೇವರ ರಗಳೆ' ಮತ್ತು ಶೇಕ್ಕಿಳಾರನ 'ಪೆರಿಯಪುರಾಣ'ಗಳಿಂದ ತೆಲುಗು 'ಬಸವ ಪುರಾಣ' ಬೇರೆಯಾಗಿರಲು ಇದೇ ಕಾರಣ. ಹೆಸರಿಗೆ 'ಬಸವ

ಪುರಾಣ'ವಾದರೂ ಸೋಮನಾಥನ ಕಾವ್ಯ ಶಿವಭಕ್ತ ಪುರಾಣ ವಾಗಿ ಬೆಳೆಯಲು ಬಹುಶಃ 'ಪೆರಿಯ ಪುರಾಣ'ದ ಪರೋಕ್ಷ ಪ್ರಭಾವ ಕಾರಣವಿರಬಹುದು. ಅದರ ಬಗ್ಗೆ ಈ ಕವಿ ಕೇಳಿರುವ ಸಾಧ್ಯತೆ ಇದೆ.

ತನ್ನ ಕಾವ್ಯದ ಮುಖ್ಯ ಪಾತ್ರವಾದ ಬಸವೇಶ್ವರನನ್ನು ಬಾಯಿ ತುಂಬ ಹೊಗಳಿ. ಕೈತುಂಬ ಅವನ ಭವ್ಯ ಚಿತ್ರವನ್ನು ಬರೆದಿದ್ದಾನೆ. ಬಸವೇಶ್ವರನಿಂದ ಔತಣವನ್ನು ಪಡೆದು ಅಲ್ಲಮಪ್ರಭು ಬಸವನನ್ನು ಕೀರ್ತಿಸುವ ಸಂದರ್ಭದಲ್ಲಿ ಸೋಮನಾಥ ತನ್ನ ಭಕ್ತಿಯ ನಾನಾ ಮುಖಗಳನ್ನು ಪ್ರದರ್ಶಿಸಿದ ರೀತಿಯಿದು (ಕನ್ನಡ ಅನುವಾದ):

"ನನ್ನ ಬಸವ! ದಂಡನಾಯಕ ಬಸವ!
ಆದಿ ಬಸವ! ಅಸಂಖ್ಯಾತರ ಬಸವ!
ಭಕ್ತರ ಬಸವ! ಆ ಪ್ರಮಥರ ಬಸವ!
ಮುಕ್ತೀಶನ ಬಸವ। ನನ್ನ ಮುದ್ದು ಬಸವ!...
ಸಿದ್ಧರ ಬಸವ! ಪ್ರಸಿದ್ಧರ ಬಸವ!
ಶುದ್ಧರ ಬಸವ! ಪ್ರಬುದ್ಧರ ಬಸವ!
ಬಸವಯ್ಯ! ಬಸವಣ್ಣ! ಬಸವ ಕುಮಾರ!
ಬಸವ! ಬಸವರಾಜ! ಬಸವಲಿಂಗ!
ವೇಗ ಹರಿಯುವ ಜಲಕ್ಕೆ ಮೈಯೆಲ್ಲ ಕಾಲು
ವೇಗ ಉರಿಯುವ ಬೆಂಕಿಗೆ ಮೈಯೆಲ್ಲ ಬಾಯಿ
ವೇಗ ಬೀಸುವ ಗಾಳಿಗೆ ಮೈಯೆಲ್ಲ ತಲೆ
ವೇಗ ಮಾಡುವ ಬಸವನಿಗೆ ಮೈಯೆಲ್ಲ ಭಕ್ತಿ"

ಇದೇ ರೀತಿ ಶಿವನು ಪಾರ್ವತಿಗೆ ಬಸವೇಶ್ವರನ ಮಹಿಮೆಯನ್ನು ವರ್ಣಿಸಿ ಹೇಳುವ ಸಂದರ್ಭದಲ್ಲೂ. ಭಕ್ತಿ ಭಂಡಾರಿಯಾದ ಬಸವನ ಚಿತ್ರವನ್ನು ಸೋಮನಾಥ ಹೀಗೆ ಕೊಡುತ್ತಾನೆ—
(ಕನ್ನಡ ಅನುವಾದ):

"ಲೋಕಾಧಿಪತಿ ನಾನು ಲೋಲಾಯತಾಕ್ಷಿ
ಪ್ರಸಿದ್ಧನಾದ ಲೋಕ ಪಾವನನೀತ
ಕಾರಣ ಲೋಕ ಸಂಹಾರಿ ನಾನು
ಕಾರಣ ಲೋಕದ ಉಪಕಾರಿ ಈತ
ಭಕ್ತವತ್ಸಲ ನಾನು ಪರ್ವತ ಪುತ್ರಿ
ಭಕ್ತರತ್ನಗಳಿಗೆ ಭಂಡಾರಿ ಈತ
ಭಕ್ತೈಕ ದೇಹಿ ನಾ ಭಾವಿಸುವವರಿಗೆ
ಭಕ್ತಜನ ಪ್ರಾಣಿ ಬಸವನು ನೋಡು
ಮುಕ್ತಿಗೆ ರಾಜನು ನಾನಾದರಿಲ್ಲಿ
ಭಕ್ತಿಗೆ ರಾಜನು ಬಸವಣ್ಣನಲ್ಲಿ
ಅಚರಲಿಂಗವು ನಾನು ಅಚಲೇಂದ್ರತನಯೆ!
ಸಚರಾಚರ ಕ್ಷೋಣಿಯಲಿ ಚರಲಿಂಗವಾತ
ಸ್ಥಿರ ಭಕ್ತಿಯಿಂದ ಸೇವಿಸಬೇಕು ನನ್ನ
ಇವನನ್ನು ನೆನೆದರೆ ಬರುವುದು ಮುಕ್ತಿ"

'ಬಸವ ಪುರಾಣ'ದಲ್ಲಿ ಸೋಮನಾಥನು ಮಾಡಿದ ಕೆಲವು ವರ್ಣನೆಗಳು ಆತನ ಪರಿಶೀಲನೆಯ ಆಳವನ್ನು ತಿಳಿಸುತ್ತವೆ. ಆಕಾರ ವರ್ಣನೆಯುಲ್ಲಾಗಲಿ, ಸ್ವಭಾವ ಚಿತ್ರಣದಲ್ಲಾಗಲಿ ಈ ಕವಿಯದು ನುರಿತ ಕೈ. ಉದಾಹರಣೆಗೆ; ಶಿವನು ಗೋಪಾಲಕನಾಗಿ ಬಂದಾಗ ಅವನ ವೇಷವನ್ನು ಈ ಕವಿ ತುಂಬ ಸಹಜವಾಗಿ ವರ್ಣಿಸಿದ್ದಾನೆ. ಅದೇ ರೀತಿ ಬೆಜ್ಜಮಹಾದೇವಿ ಶಿವನ ತಾಯಿಯಂತೆ ವರ್ತಿಸಿದ ಸಂದರ್ಭದಲ್ಲಿ ತಾಯಿಯ ಸ್ವಭಾವವನ್ನು ಅತ್ಯಂತ ಭಾವುಕತೆಯಿಂದ ನಿರೂಪಿಸಿದ್ದಾನೆ.

ತೆಲುಗಿನ ಮೂಲಸತ್ತ್ವವನ್ನು ಅರಿತ ಕವಿಯಾದುದರಿಂದ, ಆ ಭಾಷೆಯ ಗಾದೆಗಳನ್ನೂ ನುಡಿಗಟ್ಟುಗಳನ್ನೂ, ಸಹಜಾಲಂಕಾರಗಳನ್ನೂ ಈ ಕವಿ ಹಲವೆಡೆಗಳಲ್ಲಿ ಬಳಸಿಕೊಂಡಿದ್ದಾನೆ.

"ಓ ಬಸವ!
ನೀನು ಹುಟ್ಟಿದ್ದರಿಂದ
ಕಬ್ಬಿಗೆ ಹಣ್ಣು, ಚಿನ್ನಕ್ಕೆ ಸುಗಂಧ
ಶ್ರೀಗಂಧಕ್ಕೆ ಹೂವು, ಚಿತ್ರಕ್ಕೆ ಜೀವ
ಚಿನ್ನದಗೊಂಬೆಗೆ ಪ್ರಾಣ ಬಂದಂತಾಯಿತು"

'ಬಸವ ಪುರಾಣ'ದಲ್ಲಿ ಪಾಲ್ಕುರಿಕೆ ಸೋಮನಾಥನು ಬರೆದದ್ದು ಚರಿತ್ರೆಯಲ್ಲ, ಸ್ಪಷ್ಟ ಮಾಹಿತಿಗಳಿರುವ ವ್ಯಕ್ತಿ ಜೀವನವಲ್ಲ. ನೆರೆಯ ರಾಜ್ಯದಲ್ಲಿ ಧಾರ್ಮಿಕ ಕ್ರಾಂತಿಗೆ ಕಾರಣಕರ್ತನಾದ ಮಹಾನ್ ವ್ಯಕ್ತಿಯನ್ನು ತನ್ನ 'ಪುರಾಣ'ದ ನಾಯಕನನ್ನಾಗಿ ಮಾಡುವುದರಿಂದ ತೆಲುಗು ಸಾಹಿತ್ಯದಲ್ಲೇ ಒಂದು ನೂತನ ಮಾರ್ಗಕ್ಕೆ ಈತ ದಾರಿ ಮಾಡಿಕೊಟ್ಟಂತಾಯಿತು. ಸೋಮನಾಥನ ಆದರ್ಶಗಳೇ ಮೂರ್ತಿವೆತ್ತಂತಿದ್ದ ಬಸವೇಶ್ವರ, ತೆಲುಗು ಸಾಹಿತ್ಯದ 'ದೇಶಿ ನಾಯಕ'ನಾಗಿ, ವೀರಶೈವರ ಆರಾಧ್ಯದೈವವಾಗಿ, ಇನ್ನೂ ಕೆಲವು ತೆಲುಗು ಕಾವ್ಯಗಳಲ್ಲಿ ನಾಯಕಪಟ್ಟವನ್ನಲಂಕರಿಸಿದ ಸೋಮನಾಥನ 'ಬಸವಭಕ್ತಿಯ' ಪರಮಾವಧಿಯೇ ಬಸವಪುರಾಣ. ಅವನ ಪ್ರಕಾರ—

"ಬಸವನ ಶರಣೆಂದರೆ ಪ್ರತ್ಯಕ್ಷಸುಖಿ
ಬಸವನ ಶರಣೆಂದರೆ ಭವರೋಗಹರ......
ಬಸವನ ಶರಣೆಂದರೆ ಇಲ್ಲ ಆಪತ್ತು
ಬಸವನ ಶರಣೆಂದರೆ ಉಂಟು ಸಂಪತ್ತು
ಬಸವನ ಶರಣೆಂದರೆ ಉಂಟು ವಾಕ್ಸಿದ್ಧಿ
ಬಸವನ ಶರಣೆಂದರೆ ಬೆಳೆಯುವುದು ಬುದ್ಧಿ
'ಬಸವ' ಎಂಬೀ ಮೂರಕ್ಷರಗಳನೊಮ್ಮೆ
ಓದಿದರೆ ಸಾಕು ಶಿವನು ಮೆಚ್ಚುವನು"

ಕನ್ನಡ 'ಬಸವ ಪುರಾಣ': ೧೫ನೆಯ ಶತಮಾನದವನಾದ ಭೀಮಕವಿ ಪಾಲ್ಕುರಿಕೆ ಸೋಮನಾಥನ ಕಾವ್ಯವನ್ನನುಸರಿಸಿ ಕನ್ನಡ

ದಲ್ಲಿ ಬಸವ ಪುರಾಣವನ್ನು ಬರೆದಿದ್ದಾನೆ. ಒಮ್ಮೆ ಶಿವಯೋಗ ನಿದ್ರೆಯಲ್ಲಿರಲು ಸೋಮನಾಥನು ಭೀಮಕವಿಯ ಕನಸಿನಲ್ಲಿ ಬಂದು ಬಸವ ಚರಿತ್ರೆಯನ್ನು ಬರೆಯುವಂತೆ ಹೇಳಿದನಂತೆ! ತೆಲುಗಿನ ದ್ವಿಪದಿ 'ಬಸವ ಪುರಾಣ'ವನ್ನು ಷಟ್ಪದಿ 'ಬಸವ ಪುರಾಣ' ವನ್ನಾಗಿಸುವಾಗ, ಭೀಮಕವಿ ತೆಲುಗು ಕಾವ್ಯದ ಲಯ, ಉತ್ಸಾಹ, ಆವೇಶಗಳನ್ನು ತಕ್ಕಮಟ್ಟಿಗೆ ತಂದಿದ್ದಾನೆ. "ಸೋಮನಾಥನು ರಸಮೊಸರೆ ಮುನ್ನುಸುರ್ದುದನೆ ಕನ್ನಡಿಸಿ" ಹೇಳುವುದಾಗಿ ಈ ಕವಿ ಹೇಳಿಕೊಂಡಿದ್ದರೂ, ಕನ್ನಡ "ಬಸವಪುರಾಣ" ಮೂಲಕೃತಿಯ ಶಬ್ದಶಃ ಅನುವಾದವಲ್ಲ. ಹದಿನೇಳು ಕಥೆಗಳು ಕನ್ನಡ ಕಾವ್ಯದಲ್ಲಿ ಹೊಸದಾಗಿ ಸೇರಿಕೊಂಡಿವೆ. ಭೀಮಕವಿಯದು 'ಸರಸ ಮೃದುತರ ಯಮಕಗಮಕವಿಸರಸಮಾಸ' ಕೂಡಿದ ಶೈಲಿ. ತೆಲುಗು ಮೂಲದ ಆವೇಶ, ಉತ್ಸಾಹ, ಭಕ್ತಿಯ ಸಶಕ್ತ ನಿರೂಪಣೆಗಳು ಕನ್ನಡ ಕಾವ್ಯದಲ್ಲೂ ಕಂಡು ಬರುತ್ತವೆ. ಸೋಮನಾಥನ 'ಬಸವಪುರಾಣ'ದ ಪ್ರಸಿದ್ಧ ಕಥೆಗಳಲ್ಲಿ ಬೆಜ್ಜಮಹಾದೇವಿಯ ಕಥೆ ಒಂದು. ತಾನೇ ಶಿವನಿಗೆ ತಾಯಾಗಿ ಸಾಕಲು ತೊಡಗಿದ ಈ ಮುಗ್ಧಭಕ್ತೆಯ ಮಾತೃಪ್ರೇಮವನ್ನು ಪಾಲ್ಕುರಿಕೆ ಸೋಮನಾಥ ಹೀಗೆ ವರ್ಣಿಸಿದ್ದಾನೆ:

> "ತೊಂಗಿಳ್ಳಪೈ ನಿಡಿ ಲಿಂಗಮೂರ್ತಿಕಿನಿ
> ಅಂಗನಗಾವಿಂಚು ನಭ್ಯಂಜನಂಬು
> ಮುಕ್ಕೊತ್ತು ಚೆಕ್ಕೊತ್ತು ಮುಕ್ಕನ್ನುಬುಲುಮು
> ನಕ್ಕೊತ್ತು ಕಡುಪೊತ್ತು ನಟವೀಪು ನಿಮುರು
> ಪೆರುಗಂಗವಲೆನನಿ ತರುಣಿ ವೀಡ್ವಡಗ
> ಚರಣ ಮುಲ್ಕರಸಮುಲು ಚಾಗಂಗದಿಗುಚು
> ನಲುಗುಲು ನುಲುಚು ನರ್ಮಿಲಿಗಟ್ಟಿಪೆಟ್ಟಿ
> ಜಲಮುಲು ವೀಪುನ ಜಜಿಚುನಂತಂತ" (ಪು. ೬೭)

ಇದನ್ನು ಎರಡು ಷಟ್ಪದಿಗಳಲ್ಲಿ ಸ್ವಲ್ಪ ವಿಸ್ತರಿಸಿ ಭೀಮಕವಿ ಹೀಗೆ ಕನ್ನಡಿಸಿದ್ದಾನೆ:

"ಎರಡು ತೊಡೆಗಳ ಮೇಲೆ ಪರಮನ
ನಿರಿಸಿ ಸತಿ ಅಭ್ಯಂಗನವನಾ
ಚರಿಸುತೊಯ್ಯನೆ ಮೂಗನೊತ್ತುತ ಕಿವಿಯನೂದುತ್ತ
ಒರೆಸುತಂ ಮುಕ್ಕಂಗಳಂ ಮೇ
ಲುರವನುದರವನೊತ್ತುತೊತ್ತುತ
ಶಿರವನಿಕ್ಕೈಯಿಂದೆ ಬಟ್ಟಿತ್ತಾಗಲೊತ್ತುತ್ತ ॥

ಬೆಳೆಯ ಬೇಕೆಂದೆನುತ ಕೈಕಾ
ಲ್ಗಳನೊಡನೊಡನೆ ಮಿಗೆ ನಿಗುರದೆಗೆ
ವಳು ಗುರಳನಿರ್ಕುವಳು ಕೋಮಲ ತನುವನೊರೆಸು
ವಳು
ಲಲನೆಯುಂಜಲಿ ಸಲಿಲದಿಂ ಚ
ಪ್ಪಳಿಸುತಂ ಬೆನ್ನೊಳು ಶಿರಸಿನೊಳು
ಜಲವನೊತ್ತುವಳಾತ್ಮಜಗೆ ಬೆಗಡೊಂದದಂತೋವಿ ॥
(೧೪–೮, ೯)

ಒಟ್ಟಿನಲ್ಲಿ ತೆಲುಗಿನ 'ಬಸವ ಪುರಾಣ' ಮತ್ತು ಅದರ ಕನ್ನಡ ಅನುವಾದ ಬಸವೇಶ್ವರನ ವ್ಯಕ್ತಿತ್ವ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸಿವೆ ಎಂಬುದರಲ್ಲಿ ಸಂದೇಹವಿಲ್ಲ.

ಪಂಡಿತಾರಾಧ್ಯ ಚರಿತ್ರ

'ಪಂಡಿತತ್ರಯ' ಎಂಬ ಹೆಸರಿನಲ್ಲಿ ಆಂಧ್ರಕರ್ನಾಟಕಗಳಲ್ಲಿ ಪ್ರಸಿದ್ಧರಾದ ಶೈವಸಮಯಾಚಾರ್ಯರು ಶ್ರೀಪತಿಪಂಡಿತ, ಮಲ್ಲಿಕಾರ್ಜುನಪಂಡಿತ ಮತ್ತು ಶಿವಲೆಂಕಮಂಚಣಪಂಡಿತ ಎಂಬವರು. ಇವರಲ್ಲಿ ಪಾಂಡಿತ್ಯದ ಸಾಕಾರನಾದ ಮಲ್ಲಿಕಾರ್ಜುನನ ಜೀವನ

ವನ್ನು ಸೋಮನಾಥ 'ಪಂಡಿತಾರಾಧ್ಯ ಚರಿತ್ರ'ದಲ್ಲಿ ವರ್ಣಿಸಿದ್ದಾನೆ. ದೂರದ ಕರ್ನಾಟಕದ ಬಸವನನ್ನು ಕುರಿತು 'ಪುರಾಣ' ಬರೆದ ಕವಿ. ಆಂಧ್ರದಲ್ಲೇ ಇದ್ದ ಪಂಡಿತನನ್ನು ಕುರಿತು 'ಚರಿತ್ರೆ' ಬರೆದುದು ಸ್ವಾಭಾವಿಕವೇ ಆಗಿದೆ. ಸೋಮನಾಥನ ಎರಡು ಮಹತ್ತ್ವದ ದ್ವಿಪದಿ ಕಾವ್ಯಗಳಲ್ಲಿ 'ಪಂಡಿತಾರಾಧ್ಯಚರಿತ್ರ' ಎರಡನೆಯದು.

ಸೋಮನಾಥನ 'ಬಸವಪುರಾಣ'ವನ್ನು ಓರುಗಲ್ಲಿನ ಸ್ವಯಂಭೂ ದೇವಾಲಯದಲ್ಲಿ ಓದುತ್ತಿರಲು ಪ್ರತಾಪರುದ್ರ ಅದನ್ನು ಕೇಳಿದ ಕಥೆಯನ್ನು ಕುರಿತು ಹಿಂದೆ ಹೇಳಲಾಯಿತು. ಆಗ ಒಬ್ಬ ವಿಪ್ರನು 'ಬಸವಪುರಾಣ ದೇಸಿ ಛಂದಸ್ಸಿನಲ್ಲಿದೆ, ಅದು ಅಪ್ರಮಾಣ, ಅನಾದ್ಯ' ಎಂದು ತಿರಸ್ಕಾರದ ಮಾತುಗಳನ್ನಾಡಿದನು. ಈ ವಿಷಯ ತಿಳಿದ ಸೋಮನಾಥನು ಇನ್ನಷ್ಟು ಛಲದಿಂದ ಪಂಡಿತನ ಕಥೆ ಹೇಳಲು ಹೊರಟಿರಬೇಕು. ಪರಮತಗಳನ್ನು ಖಂಡಿಸಿ, ವೀರಶೈವ ಮತವನ್ನು ಪ್ರತಿಷ್ಠಾಪಿಸಲು ಪಂಡಿತಾರಾಧ್ಯನ ಮಾರ್ಗ ಅನುಸರಣೀಯವೆಂದು ಅವನು ಭಾವಿಸಿರಬೇಕು. ಈ ಕಾವ್ಯವನ್ನು ಬರೆಯುವ ಕಾಲಕ್ಕೆ ಸೋಮನಾಥನ ವೈದುಷ್ಯದ ಆಳ, ಜ್ಞಾನದ ಹರವು ಹೆಚ್ಚಿತು. ಈ ಕವಿಯ ಲೇಖನಿಯಿಂದ ಒಂದು ವಿಶ್ವಕೋಶವೇ ಹೊರಬಂದಿತು. ಇಪ್ಪತ್ತೆರಡು ಸಾವಿರ ಸಾಲುಗಳಿಗಿಂತ ಹೆಚ್ಚಿರುವ ಈ ಮಹಾಕಾವ್ಯದಲ್ಲಿ ದೀಕ್ಷಾ, ಪುರಾತನ, ವಾದ, ಮಹಿಮ ಮತ್ತು ಪರ್ವತ ಎಂಬ ಐದು ಪ್ರಕರಣಗಳಿವೆ. ಸೋಮನಾಥನ ಕಾವ್ಯಗಳಲ್ಲಿ ಮಾತ್ರವಲ್ಲದೆ ಇಡೀ ದ್ವಿಪದಿ ಸಾಹಿತ್ಯದಲ್ಲೇ 'ಪಂಡಿತಾರಾಧ್ಯ ಚರಿತ್ರ' ಅತ್ಯುತ್ಕೃಷ್ಟ ಗ್ರಂಥವೆನ್ನಬಹುದು.

ಪಂಡಿತಾರಾಧ್ಯ ಗೌರಮ್ಮ ಮತ್ತು ಮಾನಸ ಭೀಮನ ಎಂಬ

ವವರ ಪುತ್ರ. ಆಂಧ್ರದ ಗೋದಾವರಿ ಜಿಲ್ಲೆಯ ದ್ರಾಕ್ಷಾರಾಮಕ್ಕೆ ಸೇರಿದವನು. ಶ್ರೀಶೈಲ ಮಲ್ಲಿಕಾರ್ಜುನನ ಭಕ್ತನಾದ ಭೀಮನ ಮಗನಿಗೆ ಮಲ್ಲಿಕಾರ್ಜುನನೆಂದು ಹೆಸರಿಟ್ಟ. ಸೋಮನಾಥನ ಕಥನದ ಪ್ರಕಾರ ಶಿವನು ನಂದಿಯ ಬುದ್ಧಿಶಕ್ತಿಯನ್ನು, ಭೃಂಗಿಯ ಪವಿತ್ರತೆಯನ್ನು, ವೀರಭದ್ರನ ಸಾಹಸವನ್ನು ಒಂದುಗೂಡಿಸಿ ಮಲ್ಲಿಕಾರ್ಜುನನನ್ನು ಭೂಲೋಕಕ್ಕೆ ಕಳುಹಿಸಿದನು. ದ್ರಾಕ್ಷಾರಾಮದಲ್ಲಿ ಕೋಟಿಪಲ್ಲಿ ಆರಾಧ್ಯದೇವನಿಂದ ವೀರಭಕ್ತಿಯ ದೀಕ್ಷೆಯನ್ನು ಪಡೆದ ಪಂಡಿತ ಮಲ್ಲಿಕಾರ್ಜುನನು ತನ್ನ ವೇಷ ಭಾಷೆಗಳಿಂದ ಅಂದಿನ ವೈದಿಕ ಮತದವರಿಗೆ ಅಚ್ಚರಿಯನ್ನುಂಟು ಮಾಡಿದನು. ವಿಭೂತಿ, ರುದ್ರಾಕ್ಷಿ. ಲಿಂಗ ಧಾರಣೆಗಳಿಂದ ವೀರಶೈವ ಅವತಾರವನ್ನು ತೋರುತ್ತಾ, ತನ್ನ ಹೊಸ ರೀತಿಯ ಧಾರ್ಮಿಕ ತತ್ತ್ವಗಳನ್ನು ಇವನು ಉಪದೇಶಿಸತೊಡಗಿದನು.

ಪಂಡಿತ ಮಲ್ಲಿಕಾರ್ಜುನ ತನ್ನ ಅಸಾಧಾರಣ ವಿದ್ವತ್ತಿನಿಂದ ಪರಮತದವರನ್ನು ಸೋಲಿಸುತ್ತಾ ಬಂದನು. ವೇದಾಂತ. ಸಾಂಖ್ಯ, ಯೋಗ. ಬೌದ್ಧ. ಜೈನ. ಚಾರ್ವಾಕ ಮತಗಳಿಗೆ ಸೇರಿದವರನ್ನು ವಾದದಿಂದ ದಂಗುಗೊಳಿಸಿದನು. ಪಂಡಿತನ ಹಿರಿಮೆಯನ್ನು ಸಹಿಸಲಾರದೆ ಒಬ್ಬ ಬೌದ್ಧಪಂಡಿತ ರಾಜಸಭೆಯನ್ನು ಬಿಟ್ಟು ಹೋದನು. ಪ್ರೇಕ್ಷಕರಲ್ಲಿ ಕೆಲವರು ಅವನನ್ನು ಕೊಂದರು. ಪಂಡಿತನನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ರಾಜನು ಭಾವಿಸಿದಾಗ ಪಂಡಿತ ಕೆಲವು ಪವಾಡಗಳನ್ನು ತೋರಿಸಿ ಕೊನೆಗೆ ಆ ರಾಜನಿಗೆ ಶಾಪಕೊಟ್ಟನು. ಇಂತಹ ಕೆಲವು ಪವಾಡಗಳ ವರ್ಣನೆ ವೀರಶೈವ ಕಾವ್ಯಗಳಲ್ಲಿ ಸರ್ವೇಸಾಮಾನ್ಯ.

ಮಲ್ಲಿಕಾರ್ಜುನ ಬಸವೇಶ್ವರನ ಸಮಕಾಲೀನ ಕವಿ. ಕರ್ನಾಟಕದಲ್ಲಿ ಧಾರ್ಮಿಕ ಕ್ರಾಂತಿ ನಡೆಯುತ್ತಿದ್ದುದನ್ನು ಕೇಳಿದ ಪಂಡಿತ.

ಬಸವೇಶ್ವರನನ್ನು ನೋಡಲು ಹೊರಟನು. ಮಾರ್ಗ ಮಧ್ಯದಲ್ಲಿ ಬಸವನು ಕಳುಹಿಸಿದ ವಿಭೂತಿ ಅವನಿಗೆ ಲಭಿಸಿತು. ಅದನ್ನು ಮುಟ್ಟಿದ ಕೂಡಲೇ ಪಂಡಿತನಿಗೆ ಕನ್ನಡ ಭಾಷಾ ಪರಿಚಯ ಉಂಟಾಯಿತಂತೆ! ಇಂತಹ ಸುಳ್ಳು ಪ್ರಚಾರಗಳಿಂದಲೇ ಮೂಢ ನಂಬಿಕೆಗಳು ಪ್ರಬಲವಾಗುವುವು! ಕಲಿಯದೆ ಯಾವ ಭಾಷೆಯೂ ಬರುವುದಿಲ್ಲ. ಧಾರ್ಮಿಕ ಪ್ರಚಾರದಲ್ಲಿ ಇಂತಹ ಅಸತ್ಯ ಪವಾಡಗಳ ವರ್ಣನೆ ಸಾಮಾನ್ಯವಾಗಿ ಕಂಡುಬರುತ್ತದೆ. ವಿಭೂತಿಯನ್ನು ಮುಟ್ಟಿದ ಪಂಡಿತ ಕನ್ನಡದಲ್ಲಿ ಬಸವನನ್ನು ಹೊಗಳಿ ಹಾಡಿದನಂತೆ! ಮಲ್ಲಿಕಾರ್ಜುನ ಬಸವೇಶ್ವರನನ್ನು ನೋಡಲು ಬರುವ ಮುಂಚೆಯೇ ಆತನ ನಿಧನದ ಸುದ್ದಿ ತಲುಪಿತು. ಪಂಡಿತನಿಗೆ ಅತೀವ ದುಃಖವಾಯಿತು. ಕೊನೆಗೆ ಶ್ರೀಶೈಲದಲ್ಲೇ ಆತ ಲಿಂಗೈಕ್ಯನಾದ.

ಪಂಡಿತಾರಾಧ್ಯನ ಜೀವನದ ಔನ್ನತ್ಯವನ್ನು ಚಿತ್ರಿಸುವಲ್ಲಿ ಪಾಲ್ಕುರಿಕೆ ಸೋಮನಾಥ ತುಂಬ ಯಶಸ್ವಿಯಾಗಿದ್ದಾನೆ. ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ, ವೀರಶೈವದ ಮೇಲೆ ಭಕ್ತಿಯನ್ನು ಬೆಳೆಸಿಕೊಂಡು ಈ ಎರಡರ ನಡುವೆ ನಲುಗಿದ ಮಲ್ಲಿಕಾರ್ಜುನನ ಚಿತ್ತವನ್ನು ನಾವು ಕಾಣುತ್ತೇವೆ. ಅವೈದಿಕ ವೀರಶೈವದ ಎಲ್ಲ ವಿಷಯಗಳನ್ನು ಗ್ರಹಿಸದೆ ವೈದಿಕ ಮತ್ತು ವೀರಶೈವಧರ್ಮಗಳ ಸಾರವಾದ ಪ್ರತ್ಯೇಕ ಶೈವಧರ್ಮ ಪ್ರಚಾರಕ್ಕೆ ಪಂಡಿತಾರಾಧ್ಯ ತೊಡಗಿದಂತೆ ಕಾಣುತ್ತದೆ. ಸೋಮನಾಥನ 'ಪಂಡಿತಾರಾಧ್ಯ ಚರಿತ್ರ'ದಿಂದ ಆ ಕಾಲದ ಧಾರ್ಮಿಕ ಇತಿಹಾಸದ ಸ್ವರೂಪ ನಮಗೆ ಅರಿವಾಗುತ್ತದೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯ ತೆಲುಗಿನ ಶೈವ ಕವಿಗಳಲ್ಲಿ ಪ್ರಮುಖ. ಈಗ ಲಭ್ಯವಾಗುತ್ತಿರುವ ಆತನ ಕೃತಿ, 'ಶಿವತತ್ತ್ವ

ಸಾರ.' ಇದರಲ್ಲಿ ಸುಮಾರು ೫೦೦ ಪದ್ಯಗಳಿವೆ. "ವೀರಮಾಹೇಶ್ವರಾಚಾರಮಾರ್ಗಾನುಸಾರಿ"ಯಾಗಿ ಇದನ್ನು ಪಂಡಿತನು ಬರೆದನೆಂದು ಸೋಮನಾಥ ಹೇಳಿದ್ದಾನೆ. ಶೈವಧರ್ಮದ ಕೆಲವು ಅತಿರೇಕತೆಗಳನ್ನು 'ಶಿವತತ್ತ್ವಸಾರ'ದಲ್ಲಿ ನಾವು ನೋಡಬಹುದು. 'ಶಿವ ತತ್ತ್ವಸಾರ'ವಲ್ಲದೆ ಪಂಡಿತನ ಇನ್ನೂ ಅನೇಕ ರಚನೆಗಳನ್ನು 'ಪಂಡಿತಾರಾಧ್ಯಚರಿತ್ರ'ದಲ್ಲಿ ಪಟ್ಟಿ ಮಾಡಲಾಗಿದೆ. 'ಅಕ್ಷರಗದ್ಯ,' 'ನೀಲಕಂಠಸ್ತವ,' 'ರುದ್ರಮಹಿಮೆ', 'ರುದ್ರಸಹಸ್ರನಾಮ,' 'ಹರಲೀಲ' ಮುಂತಾದುವು ಈಗ ಲಭಿಸುವುದಿಲ್ಲ.

'ಜಾನುತೆನುಗು' ಸಾಮಾನ್ಯರಿಗೆ ಅರ್ಥವಾಗುತ್ತದೆಂದು, ಅದರಲ್ಲೇ ತಾನು ಕಾವ್ಯಗಳನ್ನು ಬರೆಯುವುದಾಗಿ ಹೇಳಿಕೊಂಡ ಸೋಮನಾಥ, ಪಂಡಿತನ ಚರಿತ್ರೆ ಬರೆಯುವಾಗ ನಾಯಕನ ಭವ್ಯ ವ್ಯಕ್ತಿತ್ವಕ್ಕೆ ತಕ್ಕಂತೆ ಸಂಸ್ಕೃತ ಸಮಾಸಗಳನ್ನು ಹೇರಳವಾಗಿ ಬಳಸಿದ್ದಾನೆ. ತ್ರಿಪದಿ, ರಗಳೆಯಂತಹ ತೆಲುಗು ದ್ವಿಪದಿಯಲ್ಲಿ ಒಂದು ಕಡೆ ಏಳು ಸಾಲುಗಳ ಒಂದೇ ಸಮಾಸವನ್ನು ಬರೆದ ಸೋಮನಾಥನ ಪ್ರೌಢಿಮೆಯನ್ನು ನೋಡಿ:

"ಕುಂದೇಂದು ಚಂದ್ರಿಕಾಗೋಕ್ಷೀರ ಫೇನ
ಸುಂದರಾಮಲಪರಿಸ್ಫುರಿತ ಸದ್ವರ್ಣ
ಭಸ್ಮಸಮಾಲಿಪ್ತ ಭಾವಜದೇಹ
ಭಸ್ಮಸಾತ್ಕರಣ ವಿಭಾವ ಸುಲೋಚ
ನ ಬ್ರಹ್ಮಗೀರ್ವಾಣನಾಕೇಶವಂದಿ
ತ ಬ್ರಹ್ಮಯೋಗಿ ಸದಾಪೂಜನೀಯ
ಸಕಲ ನಿಷ್ಕಲವಿಕಸಲ್ಲೀಲ......"

(ವಾದಪ್ರಕರಣ)

ಬಸವೇಶ್ವರನ ಭವ್ಯ ಚಿತ್ರವನ್ನು ಕೊಡಲು 'ಬಸವ ಪುರಾಣ'ದ ಹೆಜ್ಜೆಹೆಜ್ಜೆಗೂ ಕವಿ ಕಾತರ ತೋರಿಸಿದಂತೆಯೇ, ಪಂಡಿತನ ಅತಿ

ಲೋಕ ವ್ಯಕ್ತಿತ್ವವನ್ನು ಭಕ್ತ್ಯಾವೇಶದಿಂದ ವರ್ಣಿಸಿದ್ದಾನೆ. ಬಸವನಿಗೂ ಶಿವನಿಗೂ ಇರುವ ಭಕ್ತ-ಈಶ್ವರ ಸಂಬಂಧವನ್ನು ಸೋಮನಾಥ ನಿರೂಪಿಸಿದಂತೆಯೇ, ಪಂಡಿತನಿಗೂ ಶಿವನಿಗೂ ಇರುವ ಸಂಬಂಧವನ್ನೂ ಕೆಳಗಿನ ಸಾಲುಗಳಲ್ಲಿ ನಿರೂಪಿಸಿದ್ದಾನೆ.

"ಚಿರತಮೋಗುಣ ಪರಿಸ್ಥಿತನು ಶಿವನು
ವರಸತ್ವಗುಣವಿಕಸ್ವರನು ಪಂಡಿತನು
ಅಚರಲಿಂಗವು ನೋಡು ಆ ಲಿಂಗಮೂರ್ತಿ
ಚರಲಿಂಗವು ನೋಡು ಆ ಪಂಡಿತಯ್ಯ
ಅಸಮಲೋಕಾಧೀಶನಂಬಿಕಾಧವನು
ಅಸಮಲೋಕಾರಾಧ್ಯನಾ ಪಂಡಿತಯ್ಯ
ಅಖಿಲ ಲೋಕಮಯ ಹೈಮವತೀಶನು
ಅಖಿಲಲೋಕಾತೀತನಾ ಪಂಡಿತಯ್ಯ......
ಅಸಿತಕಂಠನು ಆ ಅಸಮಲೋಚನನು
ಭಸಿತಕಂಠನು ಶ್ರೀ ಪಂಡಿತೇಂದ್ರನು
ಭಕ್ತೈಕದೇಹನಾ ಪರಮೇಶ್ವರನು
ಭಕ್ತಸತ್ಪ್ರಾಣನಾ ಪಂಡಿತಸ್ವಾಮಿ
ಮಲ್ಲಿಕಾರ್ಜುನ ನಾಮ ಮಲ್ಲಿಕಾರ್ಜುನನು
ಮಲ್ಲಿಕಾರ್ಜುನ ಕೀರ್ತಿ ಮಲ್ಲಿಕಾರ್ಜುನನು
ಮಹಿಯಲ್ಲಿ ಪಂಡಿತ ಮಲ್ಲಿಕಾರ್ಜುನನ
ಮಹಿಮೆಯ ವರ್ಣನೆ ಮನುಜರಿಗೆ ಸಾಧ್ಯವೆ"

ಮಾನವ ವರ್ಣನೆಯಲ್ಲಿ ಮಾತ್ರವಲ್ಲದೆ ಪ್ರಾಣಿಪಕ್ಷಿಗಳನ್ನು ಚಿತ್ರಿಸುವಲ್ಲಿಯೂ ಕವಿಯ ಸೂಕ್ಷ್ಮ ಪರಿಶೀಲನೆ ಕಂಡುಬರುತ್ತದೆ. "ಕಣ್ಮುರೆದು ನಿಂತು ಮೈಮೊಚಿ ಪುಕ್ಕಗಳ ಬಿಚ್ಚಿ" ಕೂಗುವ ಕೋಳಿಯ ಚಿತ್ರವನ್ನು ಒಂದು ಕಡೆ ಸ್ವಭಾವೋಕ್ತಿಯಾಗಿ ಕೊಟ್ಟಿದ್ದಾನೆ ಸೋಮನಾಥ. ವೆಲನಾಡಿನ ಚೋಳನ ಆಸ್ಥಾನದಲ್ಲಿ ಕಣ್ಣು ಕಿತ್ತುತೆಗೆದು ಮತ್ತೆ ಕಣ್ಣು ಬರುವಂತೆ ಮಲ್ಲಿಕಾರ್ಜುನನು ಮಾಡಿದ ಅದ್ಭುತ ಪವಾಡಗಳ ವರ್ಣನೆ ಓದಲೇ ಬೇಕಾದಂಥದು.

'ಪಂಡಿತಾರಾಧ್ಯಚರಿತ್ರ'ದ ಅನೇಕ ಸಂದರ್ಭಗಳಲ್ಲಿ ಕವಿ ತುಂಬ ಆಕರ್ಷಕವಾದ ಅಲಂಕಾರಗಳನ್ನು ಬಳಸಿದ್ದಾನೆ. ಶಿವನಿಗೆ ಅರ್ಪಿಸುವ ಪದಾರ್ಥಗಳು ಈ ಕೆಳಗಿನವಂತೆ!

"ಸದಾನಂದ ಸಂಜನಿತ ಅಶ್ರುಸಮಿತಿ ಮಜ್ಜನವಾರಿ
ಮೈಪುಳಕಗಳೇ ಅರ್ಪಿಸುವ ಹೂಗಳು
ಸತತ ನಿಜಾತ್ಮಗಂಧವೇ ಧೂಪ
ಅತಿಶಯ ಜ್ಞಾನಾಂಶುಗಳು ಆರತಿಗಳು
ಶಮಿತೇಂದ್ರಿಯ ಅನುರಾಗವೇ ಪಿಂಛ
ಅಮಿತ ವಾಙ್ಮಯಗಳು ಪುಷ್ಪಾಂಜಲಿಗಳು"

ಈ ಕಾವ್ಯದ ಪರ್ವತ ಪ್ರಕರಣದಲ್ಲಿ ಶ್ರೀಶೈಲದ ಬಗೆಗೆ ಕವಿ ಬರೆದ ವಿಷಯಗಳು ಅವನ ಬಹುಭಾಷಾ ಪಾಂಡಿತ್ಯವನ್ನು ತಿಳಿಸುತ್ತವೆ. ಶ್ರೀಶೈಲಕ್ಕೆ ಬರುತ್ತಿದ್ದ ಭಕ್ತರು ಹಾಡುತ್ತಿದ್ದ ಗೀತೆಗಳನ್ನು ಪರಿಶೀಲನಾ ದೃಷ್ಟಿಯಿಂದ ನೋಡಿ ತನ್ನ ಕಾವ್ಯದಲ್ಲಿ ಅವನ್ನು ನಮೂದಿಸಿದ್ದಾನೆ ಕವಿ. ಶ್ರೀಶೈಲಕ್ಕೆ ಆಂಧ್ರದಿಂದ ಮಾತ್ರವಲ್ಲದೆ ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡುಗಳಿಂದಲೂ ಭಕ್ತರು ಬರುತ್ತಿದ್ದರು. ಆ ಭಕ್ತರು ಹಾಡುತ್ತಿದ್ದ ವಿಷಯವನ್ನು ಹೇಳುವ ಸಂದರ್ಭದಲ್ಲಿ ತಮಿಳು, ಕನ್ನಡ, ಮರಾಠಿ ಭಾಷೆಗಳಲ್ಲಿ ರಚಿಸಿ ಭಾಷಾವಿಜ್ಞಾನಿಗಳಿಗೆ ಸೋಮನಾಥ ನೆರವು ನೀಡಿದ್ದಾನೆ. ತಮಿಳು ಭಾಷೆಯಲ್ಲಿ ಪದಮಧ್ಯದ ಶ್ವಾಸಾಕ್ಷರಗಳನ್ನು ನಾದಾಕ್ಷರಗಳಾಗಿ ಉಚ್ಚರಿಸುತ್ತಾರೆ. ಇದನ್ನು ತಮಿಳು ಲಿಪಿಯಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಸೋಮನಾಥನು ಬರೆದ ತಮಿಳುಗೀತೆಯಿಂದ ಅವನ ಕಾಲದಲ್ಲೂ ತಮಿಳಿನ ಉಚ್ಚಾರ ಹಾಗೆಯೇ ಇತ್ತೆಂದು ತಿಳಿದುಬರುತ್ತದೆ. ಸೋಮನಾಥನು ಬರೆದ ಕನ್ನಡ ಭಾಗದಲ್ಲಿ ೮೧ ಸಾಲುಗಳಿವೆ. ಇದರಲ್ಲಿ ಅನೇಕ ಕನ್ನಡ ಭಕ್ತರ ಹೆಸರುಗಳು ಸಿಕ್ಕುತ್ತವೆ.

"... ... ...
ಸರ್ವಜ್ಞ ದೇವಯ್ಯ ಶಾಂತಿದೇವಯ್ಯ
ಪರ್ವತ ದೇವಯ್ಯ ಭದ್ರದೇವಯ್ಯ
ಬಾಣದೇವಯ್ಯ ನಿರ್ವಾಣ ದೇವಯ್ಯ
ಜಾಣ ದೇವಯ್ಯ ಕಲ್ಯಾಣ ದೇವಯ್ಯ.........
ಚನ್ನವ್ವ ಹೊನ್ನವ್ವ ಕನ್ನವ ಬನ್ನಿ
ಶರಣವ್ವ ಸಾಂತವ್ವ ಸರಳವ್ವ ಬನ್ನಿ
ಪುರುಷವ್ವ ಮುಪ್ಪವ್ವ ಬೊಪ್ಪವ್ವ ಬನ್ನಿ
ಮತ್ತೆ ಅಲ್ಲಡದೇವಿ ಮಲ್ಲಡದೇವಿ
ಬತ್ತುಲೇಶ್ವರದೇವಿ ಬಸವಲದೇವಿ
ಸರದೇವಿ ಗುರುದೇವಿ ವಿರುಪಾಕ್ಷದೇವಿ
ಸಿರಿದೇವಿ ಮಹದೇವಿ ಸಿದ್ದಲದೇವಿ
ಉಮದೇವಿ ಶಿವದೇವಿ ಉದ್ಭಟದೇವಿ
ಹರಹರ ಶಿವಶಿವ ಶರಣು ನೀವೆಮಗೆ
ಸಿರಿಗಿರಿ ಮಲ್ಲಯ್ಯ ಶರಣೆನ್ನಿರಯ್ಯ
ಮಂಗಳಮೂರುತಿ ಮಲ್ಲಯ್ಯನಾಳು
ಸಂಗನ ಬಸವಯ್ಯ ಶರಣೆನ್ನಿರಯ್ಯ"

ಈ ರೀತಿಯು ಬಹು ಭಾಷಾ ರಚನೆಗಳನ್ನು ಮಾಡಿದ್ದಲ್ಲದೆ 'ಪಂಡಿತಾರಾಧ್ಯ ಚರಿತ್ರ'ದಲ್ಲಿ ಕವಿ ಬೇರೆ ಬೇರೆ ಶಾಸ್ತ್ರಗಳಲ್ಲಿ ತನಗಿರುವ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾನೆ. ಗುರುಭಕ್ತಾಂಡಾರಿ ಕಥೆಯಲ್ಲಿ ಅವನ ರತಿಶಾಸ್ತ್ರ ಪಾಂಡಿತ್ಯ ವ್ಯಕ್ತವಾಗಿದೆ. ಇನ್ನೊಂದು ಕಡೆ ಇವನು ೩೨ ರೀತಿಯ ವೀಣೆಗಳನ್ನು, ೫ ರೀತಿಯ ತಂತಿಗಳನ್ನು, ೨೨ ರೀತಿಯ ಗತಿಗಳನ್ನು, ೧೪ ರೀತಿಯ ರಚನೆಗಳನ್ನು, ೪೦ ರೀತಿಯ ವಾದ್ಯ ಬಂಧಗಳನ್ನು, ೧೮ ರೀತಿಯ ಆವಾಸನಾದಗಳನ್ನು, ೭ ಪ್ರಥಮತಾಳ, ೨೭ ಶುದ್ಧತಾಳ, ೮೦ ಮಿಶ್ರತಾಳಗಳನ್ನು, ೧೦೮ ರಾಗಗಳನ್ನು ಹೆಸರಿಸಿದ್ದಾನೆ. ೭೦ ತರಹದ ಅಭಿನಯಗಳು, ೬೪ ತರಹದ ಹಸ್ತಾಭಿನಯಗಳು, ೧೦೮ ಕರಣ

ಗಳು, ೨೬ ನೇತ್ರಾಘನಿಯಮಗಳನ್ನು ಸೋಮನಾಥ ಹೇಳಿದ್ದಾನೆ. ಇಷ್ಟು ವಿಷಯಗಳನ್ನು ಕಾವ್ಯಗಳಲ್ಲಿ ಕ್ರೋಡೀಕರಿಸಿ ಕವಿಗಳು ತುಂಬ ವಿರಳವಾಗಿ ಮಾತ್ರ ಸಿಕ್ಕುತ್ತಾರೆ.

ಈ ಕಾವ್ಯ ಕನ್ನಡಕ್ಕೆ ಅನುವಾದವಾಗಿದೆ. ಕನ್ನಡ 'ಆರಾಧ್ಯ ಚರಿತ್ರ'ವನ್ನು ಸಿದ್ಧಾಂತಾಚಾರ್ಯನು ಬರೆದಿದ್ದಾನೆ. ಇತ್ತೀಚೆಗೆ ಇದು ಪ್ರಕಟವಾಗಿದೆ (ಸಂ: ಎಸ್. ಬಸವಾರಾಧ್ಯ. ಕ.ಅ.ಸಂ. ಪ್ರಕಟಣೆ. ೧೯೮೨). ಪಿಮ್ಮಸೆಟ್ಟಿ ಎಂಬುವನು 'ಪಂಡಿತಾರಾಧ್ಯ ಚರಿತ್ರ'ದ ಗುರುಭಕ್ತಾಂಡಾರಿ ಕಥೆಯನ್ನು ಮಾತ್ರ ಸ್ವೀಕರಿಸಿ ಕನ್ನಡಿಸಿದ್ದಾನೆ.

ಇತರ ತೆಲುಗು ರಚನೆಗಳು

'ಬಸವಪುರಾಣ'ಮತ್ತು 'ಪಂಡಿತಾರಾಧ್ಯಚರಿತ್ರ' ಸೋಮನಾಥನ ರಚನೆಗಳಲ್ಲಿ ಶಿಖರಪ್ರಾಯವಾದುವು. ಇವಲ್ಲದೆ ಈ ಕವಿಯ ಪ್ರತ್ಯೇಕತೆಗೆ ಉದಾಹರಣೆಗಳಂತಿರುವ ಇನ್ನೂ ಕೆಲವು ಕೃತಿಗಳಿವೆ. ಕಾವ್ಯ ಕ್ಷೇತ್ರದಲ್ಲಿ ಈತನಷ್ಟು ಪ್ರಯೋಗಗಳನ್ನು ಮಾಡಿದವರು ತುಂಬ ಕಡಿಮೆ.

ಅನುಭವ ಸಾರಮು

ಶೈಲಿಯ ದೃಷ್ಟಿಯಿಂದ ಸೋಮನಾಥನ ಕೃತಿಗಳಲ್ಲಿ ಮೊದಲನೆಯದೆಂದು ಹೇಳಬಹುದಾದ ಈ ಕೃತಿ ೨೫೩ ಪದ್ಯಗಳನ್ನೊಳಗೊಂಡಿದೆ ಭಕ್ತಿಯ ಸ್ವರೂಪ. ಶಿವಪೂಜಾವಿಧಾನಗಳು. ಜಂಗಮ ಸೇವೆ. ಷಟ್ಸ್ಥಲ ವಿವರಣೆ ಮುಂತಾದುವು ಈ ಗ್ರಂಥದಲ್ಲಿವೆ. ಈ ಗ್ರಂಥದಲ್ಲಿ ಸಾಮಾನ್ಯ ವೃತ್ತಗಳು ಮಾತ್ರವಲ್ಲದೆ ಮಾಲಿನಿ. ಮನ ಮಯೂರ. ಕ್ರೌಂಚಪದ ಮುಂತಾದ ಕೆಲವು ವಿಶೇಷ ವೃತ್ತಗಳೂ ಬಳಕೆಯಾಗಿವೆ. ಬಸವೇಶ್ವರನ ಮೇಲೆ ತನಗಿರುವ ಗಾಢ ಭಕ್ತಿ

ಯನ್ನು ಎಲ್ಲಾ ಗ್ರಂಥಗಳಲ್ಲಿ ಸಾರಿದ್ದಾರೂ. ಇದರಲ್ಲಿ ಮಾತ್ರ ಸೋಮನಾಥ ಬಸವನ ಹೆಸರೇ ಎತ್ತಿಲ್ಲ. ಬಹುಶಃ ಇದನ್ನು ರಚಿಸಿದ ಕಾಲಕ್ಕೆ ಬಸವನ ಬಗ್ಗೆ ಅವನಿಗೆ ತಿಳಿಯದೇನೋ! ಪಂಡಿತಾರಾಧ್ಯನನ್ನು ಮಾತ್ರ ಮೂರು ಪದ್ಯಗಳಲ್ಲಿ ಸ್ತುತಿಸಿದ್ದಾನೆ. 'ಅನುಭವಸಾರ'ವೆಂಬ ಈ ಗ್ರಂಥ ಶೈವಧಾರ್ಮಿಕಗ್ರಂಥ. ಸೋಮನಾಥನ ಅನಂತರದ ಕೃತಿಗಳಲ್ಲಿರುವ ಪರಮತನಿಂದೆ, ಮತಾವೇಶ 'ಅನುಭವಸಾರ'ದಲ್ಲಿ ಇಲ್ಲದಿರುವುದರಿಂದ ಇದು ಪ್ರಾಚೀನ ಗ್ರಂಥವೆಂದು ಕೆಲವು ಪಂಡಿತರು 'ಪ್ರಮಾಣ ಪತ್ರ' ನೀಡಿದರು.

ಚತುರ್ವೇದಸಾರ

'ಬಸವಲಿಂಗ' ಎಂಬ ಅಂಕಿತನಾಮದಿಂದ ಕೂಡಿದ ೩೦೦ ಸೀಸಪದ್ಯಗಳು ಈ ಗ್ರಂಥದಲ್ಲಿವೆ. ಶ್ರುತಿ ಸ್ಮೃತಿಗಳಲ್ಲಿ ಪುರಾಣಾಗಮಗಳಲ್ಲಿ ಇರುವ ಸೂಕ್ತಿಗಳನ್ನು ಭಾಷ್ಯದ ರೀತಿಯಲ್ಲಿ ಶೈವಧರ್ಮಕ್ಕನುಸಾರವಾಗಿ ಈ ಕೃತಿಯಲ್ಲಿ ಹೇಳಿದ್ದಾನೆ. ವಿಭೂತಿ, ರುದ್ರಾಕ್ಷಿ, ಲಿಂಗಧಾರಣೆಗಳ ಮಹಿಮೆ, ಶೀಲ ಲಕ್ಷಣ, ಶಿವಾನುಭವಸೂತ್ರ ವಿವರಣೆ ಮುಂತಾದುವು ಈ ಗ್ರಂಥದಲ್ಲಿವೆ. ಈ ಗ್ರಂಥವನ್ನು ಬರೆಯುವ ಕಾಲಕ್ಕೆ ಬಸವೇಶ್ವರನ ಹಾಗೂ ಆತನ ವಚನಗಳ ಪರಿಚಯ ಸೋಮನಾಥನಿಗೆ ಇದ್ದಿರಬೇಕು. ಚತುರ್ವೇದಸಾರದ ಒಂದು ಪದ್ಯದ ಭಾವಾನುವಾದ ಹೀಗಿದೆ:

"ಶಿವಶಿವಾ. ಕರ್ಣನು ಕವಚಕೊಟ್ಟು ಕೆಟ್ಟ. ವಸ್ತ್ರಕೊಟ್ಟ ದಾಸಿ ವರವನ್ನು ಪಡೆದಳು. ಗುರುತ್ಮಂತನು ಅಂಗವನ್ನು ಕೊಟ್ಟು ಕೆಟ್ಟ. ಬೆರಳುಕೊಟ್ಟು ಮಂಚಯ್ಯ ವಿಜಯನಾದ. ಶಿಬಿ ತನ್ನ ಮಾಂಸಖಂಡವನ್ನು ನೀಡಿ ಕೆಟ್ಟುಹೋದ. ಮೃಗಮಾಂಸ ಕೊಟ್ಟು ಬೇಡನು ಮೆರೆದ. ಬಲಿ ಭೂಮಿಯೆಲ್ಲಾ ಕೊಟ್ಟು ಕೆಟ್ಟ, ಚೋಳನು

ಖಾದ್ಯವನ್ನು ಕೊಟ್ಟು ಮೋಕ್ಷಪಡೆದ. ಹೀಗೆ ಲಿಂಗ ವಿಮುಖಿವಾದ ದಾನಧರ್ಮ ಪರೋಪಕಾರ ವಿಕ್ರಮಗಳು ನಿಷ್ಫಲವಾಗುತ್ತವೆಯೋ ಹೊರತು ಶರಣರ ಭಕ್ತಿಯುಕ್ತಿಗಳಿಗೆ ಸಮಾನವೇ ಬಸವಲಿಂಗ!”

ವೃಷಾಧಿಪ ಶತಕ

ತೆಲುಗಿನ ಶತಕಸಾಹಿತ್ಯದಲ್ಲಿ ಇದೊಂದು ಗಣನೀಯಕೃತಿ. ವೃಷಾಧಿಪನೆಂದರೆ ಬಸವೇಶ್ವರ. ಪ್ರತಿ ಪದ್ಯದಲ್ಲಿಯೂ ‘ಬಸವಾ, ಬಸವಾ, ಬಸವಾ ವೃಷಾಧಿಪಾ’ ಎಂಬ ಅಂಕಿತನಾಮದೊಂದಿಗೆ ಸೋಮನಾಥ ಈ ಶತಕವನ್ನು ಬರೆದು ಬಸವನನ್ನು ಬಾಯಾರೆ ಹೊಗಳಿದ್ದಾನೆ. ಬಸವೇಶ್ವರನನ್ನೇ ಈಶ್ವರನೆಂದು ಭಾವಿಸಿ, ಭಕ್ತಿಯ ನಾನಾ ಭೇದಗಳಾದ ದಾಸ್ಯ, ಸಖ್ಯ, ವಾತ್ಸಲ್ಯ ಮುಂತಾದುವುಗಳಲ್ಲಿ ಹಲವನ್ನು ತನ್ನ ಪದ್ಯಗಳಲ್ಲಿ ಪ್ರತಿನಿಧಿಸಿದ್ದಾನೆ. ಈ ಕವಿ “ನನ್ನ ಒಡೆಯನೇ, ನನ್ನ ಹೃದಯೇಶ್ವರನೇ, ನನ್ನ ಮನೋರಮನೆ, ನನ್ನ ಮನೆಯೊಡೆಯ, ನನ್ನ ವರದ, ನನ್ನ ಗುರುಲಿಂಗವೇ, ನನ್ನ ಜಂಗಮನೆ, ನನ್ನ ವರನೆ. ನನ್ನನ್ನು ಕೃಪಾಮತಿಯಿಂದ ಕಾಪಾಡು” ಎಂದು ಒಂದು ಪದ್ಯದಲ್ಲಿ ಘೋಷಿಸಿದ್ದಾನೆ.

‘ವೃಷಾಧಿಪಶತಕ’ ಮುಕ್ತಕಗಳ ಮಾಲೆಯಾದರೂ ಅಲ್ಲಲ್ಲಿ ಕೆಲವು ಕಥಾಸೂಚಕ ಪದ್ಯಗಳಿವೆ. ಬಸವೇಶ್ವರನ ಲೀಲೆಗಳು, ಪವಾಡಗಳು, ಪುರಾತನ ಭಕ್ತರ ಜೀವನ ಮುಂತಾದುವನ್ನೂ ಈ ಶತಕದಲ್ಲಿ ಸಂಕ್ಷಿಪ್ತವಾಗಿ ಕವಿ ಹೇಳಿದ್ದಾನೆ. ಈ ಶತಕದ ಶೈಲಿ ಅನಂತರ ಕಾಲದ ತೆಲುಗು ಶತಕಸಾಹಿತ್ಯಕ್ಕೆ ಆದರ್ಶವಾಯಿತು. ಶಬ್ದಾಡಂಬರ, ಅಲಂಕಾರ, ಪ್ರೌಢಭಾಷೆ ಈ ಶತಕದ ಎಲ್ಲೆ ಗಳಲ್ಲೂ ಕಾಣುತ್ತವೆ. ಸುಮಾರು ಅರ್ಧದಷ್ಟು ಪದ್ಯಗಳಲ್ಲಿ

ಸಂಸ್ಕೃತ ಸಮಾಸಗಳು ತುಂಬಿವೆ. ಸಂಸ್ಕೃತ, ತಮಿಳು, ಕನ್ನಡ, ಮರಾಠಿ. ಅಚ್ಚ ತೆಲುಗು, ಸಂಸ್ಕೃತ-ತೆಲುಗು ಸೇರಿದ ಮಣಿ ಪ್ರವಾಳಗಳಲ್ಲಿ ಪದ್ಯಗಳನ್ನು ರಚಿಸಿ ಈ ಕವಿ ತನ್ನ ವೈದುಷ್ಯವನ್ನು ಪ್ರದರ್ಶಿಸಿದ್ದಾನೆ. ಈ ಶತಕದ ಮೊದಲನೆಯ ಪದ್ಯ ಹೀಗಿದೆ:

"ಶ್ರೀಗುರುಲಿಂಗಮೂರ್ತಿ! ಸುವಿಶೇಷ ಮಹೋಜ್ಜ್ವಲಕೀರ್ತಿ! ಸತ್ಕ್ರಿಯೋ
ದ್ಯೋಗ ಕಳಾಪ್ರಪೂರ್ತಿ! ಯುವಧೂತ ಪುನರ್ಭವಜಾರ್ತಿ! ಪಾಲಿತಾ
ಭ್ಯಾಗತ ಸಂಶ್ರಿತಾರ್ಥಿ ಕವಿ ಪಂಡಿತ ಗಾಯಕ ಚಕ್ರವರ್ತಿ। ದೇ
ವಾ! ಗತಿ ನೀವೆ ಮಾಕು ಬಸವಾ! ಬಸವಾ! ಬಸವಾ! ವೃಷಾಧಿಪಾ!"

ಬಸವ ರಗಡ–ಇತರ ರಗಡಗಳು

ರಗಡ ಎಂದರೆ ರಗಳೆ. ತೆಲುಗಿನಲ್ಲಿ ಒಂಭತ್ತು ರೀತಿಯ ರಗಡಗಳಿವೆ. ತೆಲುಗಿನಲ್ಲಿ ಇದು ಪ್ರತ್ಯೇಕ ಕಾವ್ಯ ಮಾಧ್ಯಮವಾಗಿ ಬೆಳೆಯಲಿಲ್ಲ. ಕೆಲವು ಕಾವ್ಯಗಳಲ್ಲಿ ಪುಷ್ಪಾಪಚಯ ವರ್ಣನೆಗಳಿಗೆ ಮಾತ್ರ ರಗಳೆಯನ್ನು ಬಳಸಲಾಗಿದೆ. ರಗಡಗಳನ್ನು ಪ್ರತ್ಯೇಕವಾಗಿ ಬಳಸಿದ ಕವಿಗಳಲ್ಲಿ ಸೋಮನಾಥನನ್ನು ಮೊದಲು ಹೆಸರಿಸಬೇಕು. ಪಿಡುಪರ್ತಿ ಸೋಮನಾಥನು ಬರೆದ ಪಟ್ಟಿಯಿಂದ ಪಾಲ್ಕುರಿಕೆ ಸೋಮನಾಥ 'ಬಸವರಗಡ,' 'ಬಸವಾರಾಧ್ಯರಗಡ,' 'ಸದ್ಗುರು ರಗಡ,' 'ಗಂಗೋತ್ಪತ್ತಿರಗಡ' ಎಂಬುವನ್ನು ಬರೆದಂತೆ ತಿಳಿಯುತ್ತದೆ. 'ಬಸವರಗಳೆ,' 'ಸದ್ಗುರುರಗಳೆ,' 'ಗಂಗೋತ್ಪತ್ತಿರಗಳೆ' ಎಂಬುವು ಕನ್ನಡದಲ್ಲಿ ಸಿಕ್ಕುತ್ತಿವೆ. ತೆಲುಗಿನಲ್ಲಿ 'ಬಸವರಗಡ' ಎಂಬುದು ಲಭಿಸುತ್ತಿದೆ.

ತೆಲುಗು 'ಬಸವರಗಡ'ದ ಪ್ರಾರಂಭದಲ್ಲಿ ಉತ್ಸಾಹವೃತ್ತವಿದೆ. ಪ್ರತಿ ಪಾದಾಂತ್ಯದಲ್ಲಿಯೂ 'ಶರಣು ಬಸವ' ಎಂಬ ಅಂಕಿತನಾಮ ಕಂಡುಬರುತ್ತದೆ. ಆದ್ಯಂತಗಳಲ್ಲಿ ಎರಡು ಕನ್ನಡ

ಪದ್ಯಗಳಿರುವುದರಿಂದ ಕೆಲವರು ಇದನ್ನು ಕನ್ನಡ ಗ್ರಂಥವೆಂದು ಪರಿಗಣಿಸಿದ್ದಾರೆ. ಎಲ್ಲಾ ಸಂಸ್ಕೃತ ಪದ್ಯಗಳೇ ಆಗಿರುವುದರಿಂದ ಇವನ್ನು ತೆಲುಗರು. ಕನ್ನಡಿಗರಿಬ್ಬರೂ ತಮ್ಮದೆನ್ನಬಹುದು.

ಶ್ರೀ ವೃಷಾಧಿನಾಯಕ ಪ್ರಸಿದ್ಧಭಾವ ಶರಣು ಬಸವ
ತಾವಕಾಂಘ್ರಿಸೇವಕಾಘ ದಾಸ ದಾಸ ಶರಣು ಬಸವ
ನಂದಿನ ದ್ವಿತೀಯ ಶಂಭು ನಾಮಧೇಯ ಶರಣು ಬಸವ
ವಂದಿತ ತ್ರಿಲೋಕ ವಿಬುಧವಾರ ನಿಕಾಯ ಶರಣು ಬಸವ
ಅಚಲ ಶೈವ ಧರ್ಮ ನಿರ್ಣಯಾವತಾರ ಶರಣು ಬಸವ
ಪ್ರಚುರ. ಯೋಗಮಿತಾಂಘ್ರಿ ಧರ್ಮ ಪಥವಿಹಾರ ಶರಣು ಬಸವ
ಪ್ರಮಥಗಣ ಪದ ಪ್ರಸಿದ್ಧ ಪಟ್ಟಭದ್ರ ಶರಣು ಬಸವ

ಬಸವೋದಾಹರಣವು

ಪಾಲ್ಕುರಿಕೆ ಸೋಮನಾಥನ ಸ್ವೋಪಜ್ಞತೆಯ ಫಲವಾಗಿ ಅವತರಿಸಿದ ಹೊಸ ಕಾವ್ಯಪ್ರಕಾರ ಉದಾಹರಣ. ತೆಲುಗಿನ ಉದಾಹರಣ ಸಾಹಿತ್ಯಕ್ಕೆ ಈ ಕವಿಯೇ ಮೂಲ ಕರ್ತನಾಗಿದ್ದಾನೆ. ಮಾರ್ಗ-ದೇಶಿಗಳ ಸಮ್ಮಿಲನದ ವಿಶಿಷ್ಟರಚನೆ ಇದು. ಉದಾಹರಣ ಒಂದು ಲಘುಕೃತಿ. ಇದರಲ್ಲಿ ಮುಖ್ಯವಾಗಿ ಸ್ತುತಿ ಇರುತ್ತದೆ. ಪ್ರಥಮಾ ವಿಭಕ್ತಿಯಿಂದ ಸಂಬೋಧನೆಯವರೆಗಿನ ಒಂದೊಂದು ವಿಭಕ್ತಿಯಲ್ಲಿ ಸ್ತುತಿ ಮಾಡಲಾಗುತ್ತದೆ. ಒಂದೊಂದು ವಿಭಕ್ತಿಯಲ್ಲೂ ಒಂದು ಸಂಸ್ಕೃತ ಸಂಪ್ರದಾಯದ ಪದ್ಯ. ಒಂದು ಕಳಿಕ (ರಗಳೆಯ ರಚನೆ). ಒಂದು ಉತ್ಕಳಿಕ— ಹೀಗೆ ಮೂರು ಛಂದೋಬಂಧಗಳಿರುತ್ತವೆ. ಕೊನೆಯಲ್ಲಿ ಎಲ್ಲಾ ವಿಭಕ್ತಿಗಳು ಸೇರಿದ ಒಂದು ಪದ್ಯವಿರುತ್ತದೆ.

ಉದಾಹರಣ ಕಾವ್ಯದ ರಹಸ್ಯವೇನೆಂಬುದನ್ನು ತೆಲುಗಿನ ಪ್ರಸಿದ್ಧ ಸಾಹಿತಿ ವಿಶ್ವನಾಥ ಸತ್ಯನಾರಾಯಣ ಅವರು ಸೊಗಸಾಗಿ ವಿಶ್ಲೇಷಿಸಿದರು:

"ಜಗತ್ತೆಲ್ಲಾ ಕ್ರಿಯಾರೂಪ. ಸರ್ವಕ್ರಿಯೆಯು ಪರಮೇಶ್ವರನಲ್ಲಿ ಪರ್ಯವಸಾನವಾಗುತ್ತದೆ. ಧಾತು ಸರ್ವದಾ ವಿಭಕ್ತ್ಯಾಶ್ರಯವಾಗಿರುತ್ತದೆ. ಯಾವುದೋ ಒಂದು ವಿಭಕ್ತಿಗೆ ಸಂಬಂಧಿಸದ ಕ್ರಿಯೆ (ಕ್ರಿಯಾಪದ) ಇಲ್ಲ. ಆದುದರಿಂದ ಎಲ್ಲ ವಿಭಕ್ತಿಗಳಿಂದ ಪರಮೇಶ್ವರನನ್ನು ಸ್ತುತಿಸಿದರೆ ಭಗವಂತನು ಸರ್ವಕ್ರಿಯಾಸ್ಥಾನಭೂತನೆಂಬುದು ಧ್ವನಿ. ಇದು ಉದಾಹರಣ ಕಾವ್ಯ ರಹಸ್ಯ." ('ಉದಾಹರಣ ವಾಙ್ಮಯಚರಿತ್ರ' ಲೇಖಕರಾದ ಎನ್. ವೆಂಕಟರಾವು ಅವರಿಗೆ ಬರೆದ ಪತ್ರ).

ತನ್ನ 'ಬಸವೋದಾಹರಣ'ದಲ್ಲಿ ಸೋಮನಾಥ ಬಸವೇಶ್ವರನ ಮಹಿಮೆಯನ್ನು ಸ್ತುತಿಸಿದ್ದಾನೆ. ಇದರ ಪ್ರಥಮಾ ವಿಭಕ್ತಿಯ ಪದ್ಯಗಳು ಹೀಗಿವೆ.

ಪ್ರಥಮಾ ವಿಭಕ್ತಿ

ಉ॥ ಶ್ರೀಗುರುಲಿಂಗ ತತ್ಪರುಡಶೇಷ ಜಗನ್ನಿಧಿ, ಶುದ್ಧತತ್ತ್ವಸಂ
ಯೋಗ ಸುಖಪ್ರಪೂರ್ತಿ ವೃಷಭೋತ್ತಮಮೂರ್ತಿಯುದಾತ್ತಕೀರ್ತಿ ದಿ
ವ್ಯಾಗಮ ಮಾರ್ಗವರ್ತಿ ಬಸವಯ್ಯ ಕೃಪಾಂಬುಧಿ ಮಾಕು ದಿವ್ಯ ಸಂ
ಭೋಗಮುಲಂ ಬ್ರಸಾದಸುಖಭೋಗ ಮುಲಂಗರುಣಿಂಚುಗಾವುತನ್

ಕಳಿಕ

ವೆಂಡಿಯುದ್ರಿಭುವನವಿನುತಿ ಸಮೇತುಡು
ಮಂಡಿತ ಸದ್ಗುಣ ಮಹಿಮೋಪೇತುಡು
ಸುರುಚಿರ ಶಿವಸಮಸುಖ ಸುಧಾನುಡು
ಪರಮಪರಾಪರಭರಿತ ಜ್ಞಾನುಡು
ವಿದಿತಾನಂದಾನ್ವಿತ ಮನಸ್ಕುಡು
ಸದಮಲ ವಿಪುಲ ವಿಶಾಲ ಯಶಸ್ಕುಡು
ಶ್ರೀವಿಲಸಿತ ಪದ ಚಿರತರಭದ್ರುಡು
ಗಾವುನ ಸಾಕ್ಷಾತ್ ಕಲಿಯುಗರುದ್ರುಡು

ಉತ್ಕಳಿಕ

ಭುವನೋಪಕಾರ
ಭವವೋದವೀರ
ಭಕ್ತಿಸಂಯೋಗ
ಮುಕ್ತಿಸಂಭೋಗ
ಸೌಖ್ಯಾಬ್ಧಿಲೋನ
ಮುಖ್ಯುಡ್ಯತಾಸ
ವೆಲಯು ಶುಭಕರುಡು
ಇಲವಿಶ್ವಗುರುಡು

ಹೀಗೆಯೇ ಒಂದೊಂದು ವಿಭಕ್ತಿಗೆ ಒಂದೊಂದು ವರ್ಣ ಛಂದಸ್ಸಿನ ಪದ್ಯ, ಒಂದು ಕಳಿಕ ಮತ್ತೊಂದು ಉತ್ಕಳಿಕ ಇರುತ್ತವೆ. ಎಲ್ಲಾ ವಿಭಕ್ತಿಗಳಾದ ಮೇಲೆ ಒಂದು ಸಾರ್ವವಿಭಕ್ತಿಕ ಪದ್ಯವಿರುತ್ತದೆ.

ಉ॥ನೀವು ದಯಾಪಯೋನಿಧಿವಿ ನಿನ್ನು ನುತಿಂಚಿನಗಲ್ಗು ಭಕ್ತಿ ನೀ
ಚೇಪರವೀರಶೈವರತಿ ಚೇಕುರು. ನೀಕಯಿಯಿತ್ತು ಗಬ್ಬಮುಲ್
ನೀವಲನಂ ಗೃತಾರ್ಥತ ಜನಿಂಚುನು. ನೀಕು ನಮಸ್ಕರಿಂತು ನಾ
ಭಾವಮು ನಂದು ನುಂಡಿನನು ಬಾಯಕುಮೀ ಬಸವಯ್ಯ!
ವೇಡೆದನ್

ಇದರಲ್ಲಿರುವ ವಿಭಕ್ತಿಗಳ ವಿವರ:

ನೀನು ದಯಾಪಯೋನಿಧಿ........... ಪ್ರಥಮಾ ವಿಭಕ್ತಿ
ನಿನ್ನನ್ನು ಸ್ತುತಿಸಿದರೆ ಭಕ್ತಿ ಉಂಟಾಗುತ್ತದೆ...........ದ್ವಿತೀಯ ವಿ
ನಿನ್ನ ಕೈಯಲ್ಲಿ ಪರವೀರಶೈವರತಿ ಸಾಧ್ಯವಾಗುತ್ತದೆ......ತೃತೀಯ ವಿ
ನಿನಗಾಗಿ ನೀಡುತ್ತೇನೆ ಕಾವ್ಯಗಳ......ಚತುರ್ಥಿ ವಿ
ನಿನ್ನದೆಸೆಯಿಂದ ಕೃತಾರ್ಥತೆ ಹುಟ್ಟುತ್ತದೆ......ಪಂಚಮಿ ವಿ
ನಿನಗೆ ನಮಸ್ಕಾರ......ಷಷ್ಠಿ ವಿ
ನನ್ನ ಭಾವನೆಯಲ್ಲಿರು......ಸಪ್ತಮಿ ವಿ
ಬಸವಯ್ಯ! ಬೇಡಿಕೊಳ್ಳುತ್ತೇನೆ......ಸಂಬೋಧನೆ

ಸೋಮನಾಥನ 'ಬಸವೋದಾಹರಣದ' ಅನಂತರ 'ತ್ರಿಪುರಾಂತಕ ಉದಾಹರಣ,' 'ಶ್ರೀಘಂಟೇಶ್ವರ ಉದಾಹರಣ.' 'ಶ್ರೀ ಕೃಷ್ಣೋದಾಹರಣ' ಮುಂತಾದ ಹಲವು ಕಾವ್ಯಗಳು ಹೊರಬಂದವು. ಸೋಮನಾಥನೇ ಸಂಸ್ಕೃತದಲ್ಲಿಯೂ 'ಬಸವೋದಾಹರಣ'ವನ್ನು ಬರೆದಿದ್ದಾನೆ. ಇದು ತೆಲುಗು 'ಬಸವೋದಾಹರಣ'ದ ಅನುವಾದ ಮಾತ್ರವಾಗಿರದೆ ಒಂದು ಸ್ವತಂತ್ರ ಕೃತಿಯಾಗಿದೆ. ಇದರ ಆದ್ಯಂತ ಪದ್ಯಗಳು ಹೀಗಿವೆ:

ಪ್ರಥಮಾ ವಿಭಕ್ತಿಃ

ಮಾಲಿನಿ ॥ ಜಯತು ಬಸವರಾಜಃ ಪ್ರಾಣಲಿಂಗಾತ್ಮ ಪೂಜಃ
ತರುಣ ದಿವಿಜ ಭೂಜಃ ಸ್ಮೇರ ಸುಚಿತ್ಸರೋಜಃ
ಗಣಪತಿಪದಧೀನಃ ಖ್ಯಾತದಾನಾವಧಾನಃ
ಸರಸ ಮಧುರಗಾನಃ ಸ್ವಾನುಭೂತ್ಯೈಕಮಾನಃ

ಕೊನೆಯ ಆರ್ಯಾ ಪದ್ಯ

ಶ್ರೀ ಬಸವರಾಜ ಗುಣಮಣಿ
ಖಚಿತಂ ಜಯತಾತ್ ಸುವರ್ಣಮೇತತ್
ಸೋಮ ಸುಕವಿನಾರಚಿತಂ
ಪ್ರಮಥಾಭರಣಂ ಸದಾಮುದಾಹರಣಂ

ಕನ್ನಡ ಗ್ರಂಥಗಳು

ಪಾಲ್ಕುರಿಕೆ ಸೋಮನಾಥನ ಕನ್ನಡ ಗ್ರಂಥಗಳಾವುವೂ ಅಷ್ಟು ಮಹತ್ತ್ವವುಳ್ಳಂಥವಲ್ಲ. ಆದರೂ ಕನ್ನಡದಲ್ಲಿ ಪ್ರಸಿದ್ಧನಾಗಿರುವ ಕವಿ ಎಂಬ ನೆಪದಿಂದ ಅವನ ಕನ್ನಡ ಗ್ರಂಥಗಳನ್ನೂ ಪರಿಚಯ ಮಾಡಿಕೊಳ್ಳುವ ಆವಶ್ಯಕತೆಯಿದೆ.

ಗಣ ಸಹಸ್ರನಾಮ

'ಗಣಸಹಸ್ರನಾಮ' ಮತ್ತು 'ಸಹಸ್ರಗಣನಾಮ' ಎಂಬ ಹೆಸರುಗಳಲ್ಲಿ ಅನೇಕ ಹಸ್ತಪ್ರತಿಗಳು ಸಿಕ್ಕುತ್ತವೆ. 'ಗಣಸಹಸ್ರನಾಮ'ವನ್ನು ಬರೆದು ಮಲ್ಲಿಕಾರ್ಜುನ ಪಂಡಿತಾರಾಧ್ಯನು ಊರ್ಧ್ವ ನೇತ್ರವನ್ನು ಪಡೆದನೆಂದು ತೋಂಟದಾರ್ಯನ 'ಪಾಲ್ಕುರಿಕೆ ಸೋಮೇಶ್ವರ ಪುರಾಣ'ದಲ್ಲಿದೆ. ಸೋಮನಾಥನು 'ಪಂಡಿತಾರಾಧ್ಯಚರಿತ್ರ'ದಲ್ಲಿ ಪಂಡಿತನ ರಚನೆಗಳೆಂದು ಕೊಟ್ಟ ಪಟ್ಟಿಯಲ್ಲೂ ಈ ರಚನೆ ಇದೆ. ಬಹುಶಃ ಪಂಡಿತಾರಾಧ್ಯನ 'ಗಣಸಹಸ್ರನಾಮ'ವನ್ನು ಪಾಲ್ಕುರಿಕೆ ಸೋಮನಾಥ ವಿಸ್ತರಿಸಿದನೆಂದು ತೋರುತ್ತದೆ. ಈ ಕೃತಿಯ ಕೊನೆಯಲ್ಲಿರುವ ಕೆಳಗಿನ ಪದ್ಯ ಈ ಅಭಿಪ್ರಾಯಕ್ಕೆ ಪೋಷಕವಾಗಿದೆ.

ಶ್ರೀ ಮಲ್ಲಿಕಾರ್ಜುನಾರ್ಯಂ
ಧೀಮಂತಂ ಪಾಪರಹಿತ ಗಣಸಂಕುಳಮಂ
ಪ್ರೇಮದಿ ಸ್ತುತಿಸಿದ ಸಾಸಿರ
ನಾಮ ಜಪವೆಂದು ಪೊಗಟ್ಟು ವಿಸ್ತರಿಸಿದವಂ

ಈ ಗ್ರಂಥದಲ್ಲಿ ಕರನ್ಯಾಸ, ಅಂಗನ್ಯಾಸಾದಿ ಜಪಕ್ರಮಗಳು ಸಂಸ್ಕೃತದಲ್ಲಿವೆ. ಅನಂತರ ಒಂದು ಕನ್ನಡ ಗದ್ಯಭಾಗವಿದೆ. ಅನಂತರ ಲಲಿತ ರಗಳೆಯಲ್ಲಿ ಪ್ರಮಥಗಣಗಳ ಹೆಸರುಗಳನ್ನು ಬರೆಯಲಾಗಿದೆ. ಅದಾದ ಮೇಲೆ ರುದ್ರ ಗಣಗಳು. ಯೋಗಾಚಾರ್ಯರು, ತ್ರಿಷಷ್ಟಿ, ಷೋಡಶ, ತ್ರಯೋದಶ, ದಶಗಣಗಳ ಹೆಸರುಗಳಿವೆ. 'ಪಂಡಿತದೇಶಿಕ ಕೃಪೆಯಿಂ ಖಂಡೇಂದು ಕಪರ್ದಿಯೊಲ್ದ ಹರಗಣನಾಮವ, ಚಂಡಕರ ವಿಮಲಮತಿಯೊಳ್ ಕೊಂಡೆಸಗಿದ ಸೋಮನಾಥ ಸದ್ಗುಣಯೂಥಂ'—ಎಂದು ಈ ಕೃತಿಯ ಬಗ್ಗೆ ಹೇಳಲಾಗಿದೆ.

ಶೀಲ ಸಂಪಾದನೆ

ಇದು ಪಾಲ್ಕುರಿಕೆ ಸೋಮನಾಥನ ಹೆಸರಿನಲ್ಲಿರುವ ಇನ್ನೊಂದು ರಚನೆ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳಿರುವ ಈ ಗದ್ಯ ರಚನೆಯನ್ನು ಆರ್. ನರಸಿಂಹಾಚಾರ್ಯರು ಸೋಮನಾಥನ ಗ್ರಂಥಗಳಲ್ಲಿ ಸೇರಿಸಿದ್ದಾರೆ. 'ವೀರಮಾಹೇಶ್ವರ ತತ್ವದಲ್ಲಿ ಸತ್ಯಾಚಾರಸಂಪನ್ನರಾಗಿರ್ದ ಶರಣರು ಅಱುವತ್ತಾರು ಶೀಲಂಗಳಂ ನಡಸುವ ಪರಿಯೆಂತೆಂದೊಡೆ',—ಎಂದು ಆರಂಭವಾಗುವ ಈ ಗ್ರಂಥ ವೀರಶೈವರ ಕೈಪಿಡಿಯಂತಿದೆ.

ಹರಗಣ ಮಾಲೆ

ಪಾಲ್ಕುರಿಕೆ ಸೋಮನಾಥನ ಹೆಸರಿನಲ್ಲಿರುವ ಈ ರಚನೆ ಯಾರ ಗಮನಕ್ಕೂ ಬಂದಿಲ್ಲ. 'ಸಹಸ್ರಗಣನಾಮ'ದಂತೆಯೇ ಹಗರಣಗಳ ಪಟ್ಟಿಯನ್ನೊಳಗೊಂಡಿರುವ ಈ ಕೃತಿಯಲ್ಲಿ ಹೆಸರುಗಳ ಹೊರತು ಇನ್ನೇನೂ ಇಲ್ಲ.

ನನ್ನಯ್ಯನ ನಾದಯ್ಯ ಗಾಣದ ಕನ್ನಪ್ಪಯರೆ ಕಣ್ಣನಂ
ಕನ್ನದ ಮಾರಯ್ಯ ಅಗ್ಘಣಿಯ ಹೊನ್ನಯ್ಯನುದಾರಯ್ಯನಂ
ಮನ್ನಣೆಯ ಬಹುರೂಪು ಚೌಡಯ್ಯ ಕಿನ್ನರಯ್ಯ ಬ್ರಹ್ಮಯ್ಯನಂ
ಸಂತದ ಜೋಗಯ್ಯ ಮಾದಾರ ಚೆನ್ನರೆಲ್ಲರ ನೆನೆವೆ

ದಶವಿಧ ಪಾದೋದಕ ವಿವರ

ಈ ಕವಿಯ ಹೆಸರಿನಲ್ಲೇ ಇರುವ ಮತ್ತೊಂದು ಲಘುಕೃತಿ ಇದು. ಒಂದು ಹಸ್ತಪ್ರತಿಯ ಆರೇ ಪತ್ರಗಳಲ್ಲಿರುವ ಈ ರಚನೆಯಲ್ಲಿ ವೀರಶೈವರ ದಶವಿಧ ಪಾದೋದಕದ ವಿವರಣೆಯಿದೆ. 'ಪಾಲ್ಕುರಿಕೆ ಸೋಮಾರಾಧ್ಯರು ನಿರೂಪಿಸಿದ ಏಕಾದಶ ಪ್ರಸಾದ

ನಿರ್ಣಯ 'ವೆಂದು ಹೇಳಲಾದ ಈ ಕೃತಿಯಲ್ಲಿ 'ಅಡಿಪಾದದಿಂದ ಮೂರುವೇಳೆ ಸ್ಪರ್ಶನ ಮಾಡಿಕೊಳ್ಳುವುದೆ ಧೂಳಿ ಪಾದೋದಕ ವೆನಿಸುವುದು '—ಇತ್ಯಾದಿಯಾಗಿ ವಿವರಣೆಗಳಿವೆ.

ರಗಳೆಗಳು

ರಗಳೆಗೆ ಕನ್ನಡದಲ್ಲಿರುವ ಕಾವ್ಯಗೌರವ ತೆಲುಗಿನಲ್ಲಿಲ್ಲ. ತೆಲುಗಿನ ಪ್ರತ್ಯೇಕ ಕೃತಿಗಳಲ್ಲಿ ರಗಳೆ ಪ್ರಯುಕ್ತವಾಗಿರುವುದು ಬಹಳ ವಿರಳ. ತೆಲುಗಿನಲ್ಲಿ ರಗಳೆಯನ್ನು ಪ್ರತ್ಯೇಕವಾಗಿ ಪ್ರಯೋಗಿಸಿದ ಕವಿಗಳಲ್ಲಿ ಸೋಮನಾಥನೇ ಮೊದಲಿಗನು. ಸೋಮನಾಥನ ರಗಳೆಯ ರಚನೆಗಳನ್ನು ಕನ್ನಡ ಕೃತಿಗಳೆಂದೂ. ಕೆಲವು ತೆಲುಗು ಕೃತಿಗಳೆಂದು ಕೆಲವರು ಹೆಸರಿಸಿದ್ದಾರೆ. ಸಂಸ್ಕೃತಪದ ಬಹಳವಾಗಿರುವ ಈ ರಚನೆಗಳು ಈ ಎರಡು ಭಾಷೆಗಳಲ್ಲಿ ಯಾವ ಭಾಷೆಗಾದರೂ ಸೇರುತ್ತವೆ.

ಸೋಮನಾಥನ ಗಂಗೋತ್ಪತ್ತಿರಗಳೆ ಕನ್ನಡದ ಕೃತಿ. ಗಂಗಾವತರಣವನ್ನು ವರ್ಣಿಸುವ ಈ ಕೃತಿಯನ್ನು ಕುರಿತು ಡಿ. ಎಲ್. ನರಸಿಂಹಾಚಾರ್ಯರು ಬರೆದಿದ್ದಾರೆ. ('ಪೀಠಿಕೆಗಳು ಲೇಖನಗಳು ಪು. ೪೩೯). ಅವರ ಕೆಲವು ಸಾಲುಗಳು:

ಸಿಂಧುಗಳ ಮಿಾ ದಳವೇಱಿ ಕರೆಯೇಱಿ ನೆರ
ವುತ್ತ ಮೊರೆವುತ್ತ ಮರಳುತ್ತ ಹೊರಳುತ್ತ
ಹತ್ತುತ್ತ ಹರಿವುತ್ತ ಹಬ್ಬುತ್ತ ಕಾಬುತ್ತ
ಸುಳಿವುತ್ತ ಸೂಸುತ್ತ ಘೂಳುಘೂಳುಘೂಳಿಸುತ್ತ
ಎಳೆವುತ್ತ ತೆರೆಗಳ ಭ್ರಂಕಷಾವಾಗುತ್ತ
ನೊರೆಗಳೆಸೆವುತ್ತ ಕೂಲಂಕಷಾವಾಗುತ್ತ
ಉರುಬುದ್ಬುದಂಗಳುದ್ಭವಿಸುತ್ತಲೊಡೆವುತ್ತ
ಶ್ರುತಿಯೊಳುದ್ಗೀರ್ಣಾಂತರಂಗಾ ಎನುತಿರಲು...

'ಸದ್ಗುರುರಗಳೆ' ಸೋಮನಾಥನ ಕನ್ನಡ ರಚನೆಗಳಲ್ಲಿ ಒಂದು. ಇದು ಪ್ರತಿಪಾದಾಂತ್ಯದಲ್ಲಿಯೂ 'ಸದ್ಗುರುವೆ' ಎಂದು ಮುಕ್ತಾಯವಾಗುತ್ತದೆ. ಲಲಿತರಗಳೆಯಲ್ಲಿ ರಚಿತವಾದ ಈ ಕೃತಿಯಲ್ಲಿ ಸುಮಾರು ೨೨೦ ಪಾದಗಳಿವೆ. ಸೋಮನಾಥ ಪ್ರಮುಖವಾಗಿ ತೆಲುಗು ಕವಿಯಾದುದರಿಂದ ಈ ಕೃತಿಯಲ್ಲಿ ತೆಲುಗಿನ ಛಂದಸ್ಸಂಪ್ರದಾಯದಂತೆ ಪಡಿಯನ್ನೂ ಬಳಸಿದ್ದಾನೆ. ಇದೂ ಕೂಡ ಸಂಸ್ಕೃತ ಪದಗಳಿಂದ ತುಂಬಿದೆ.

ಶ್ರೀ ರುದ್ರ ಮಧ್ಯಗತ ಮಂತ್ರಮುಖ ಸದ್ಗುರುವೆ
ಗೌರವ ಶ್ರೀಮೂಲಮಂತ್ರಮುಖ ಸದ್ಗುರುವೆ
ಶ್ರೀ ಷಡಕ್ಷರಜ ಮನುಜಾಲಮುಖ ಸದ್ಗುರುವೆ
ಶೇಷಮಂತ್ರಾದಿ ಪಾತಾಳಮುಖ ಸದ್ಗುರುವೆ
ಮೂಲ ಪಂಚಾಕ್ಷರ ವಿಸರ್ತಾತ ಸದ್ಗುರುವೆ......

'ಬಸವರಗಳೆ'ಯನ್ನು ತೆಲುಗಿನದೆಂದು ತೆಲುಗು ವಿದ್ವಾಂಸರು, ಕನ್ನಡದ್ದೆಂದು ಕನ್ನಡ ವಿದ್ವಾಂಸರು ಹೇಳುತ್ತಾರೆ. ಇದರ ಆದ್ಯಂತಗಳಲ್ಲಿ ಕನ್ನಡ ಪದ್ಯಗಳಿವೆ. ರಗಳೆಯಲ್ಲೂ ತೆಲುಗು ಸಂಪ್ರದಾಯದ ಪಡಿಯನ್ನು ಪಾಲಿಸಿದ್ದೇ ತೆಲುಗುರಚನೆ ಎನ್ನಲು ಕಾರಣ. ಸೋಮನಾಥ ಇದನ್ನು ಸಂಸ್ಕೃತ, ಕನ್ನಡ ಮತ್ತು ತೆಲುಗುಬಲ್ಲ ಎಲ್ಲ ಜನರೂ ಓದಲೆಂದೇ ಬರೆದಿರಬೇಕು. (ಅದಕ್ಕೇ ಇದನ್ನು ಅವನ ತೆಲುಗು ಗ್ರಂಥಗಳಲ್ಲೂ ಸೇರಿಸಲಾಗಿದೆ).

ಶ್ರೀ ವೃಷಾಧಿನಾಯಕ ಪ್ರಸಿದ್ಧಭಾವ ಶರಣು ಬಸವ
ತಾಪಕಾಂಘ್ರಿ ಸೇವಕಾಘದಾವದಾಹ ಶರಣು ಬಸವ
ನಂದಿತ ದ್ವಿತೀಯ ಸಂಘನಾಮಧೇಯ ಶರಣು ಬಸವ
ವಂದಿತ ತ್ರಿಲೋಕ ವಿಭುದ ವರಸಕಾಯ ಶರಣು ಬಸವ

ಇತ್ಯಾದಿಯಾಗಿ ೧೦೮ ಪಾದಗಳಲ್ಲಿ ಈ ರಚನೆಯಿದೆ. ಕೆಲವು ಕಡೆ ಕಿವಿಗೆ ಇಂಪಾದ ಶಬ್ದಾಲಂಕಾರಗಳಿದ್ದು ಈ ರಚನೆಯ ಸೌಂದರ್ಯಕ್ಕೆ ಪೋಷಕವಾಗಿವೆ.

ಅಜಿತ ಓಜಿನ ಮಹಿತಮಾನ ವಿಹಿತದಾನ ಶರಣು ಬಸವ
ರಜಿತಕಾಲ ಸುಹಿತಶೀಲ ಸಹಿತಲೋಲ ಶರಣು ಬಸವ

ಗದ್ಯಗಳು

'ಗದ್ಯ' ಎಂಬ ಹೆಸರಿನ ರಗಳೆ ಛಂದಸ್ಸಿನ ರಚನೆಗಳು ಕೆಲವಿವೆ. ಸೋಮನಾಥನ ಈ ಕೃತಿಗಳು ಕೂಡ ಸಂಸ್ಕೃತಪದ ಬಹುಳವಾಗಿರುವುದನ್ನು ನೋಡಿದಾಗ. ಅವು ಸಂಸ್ಕೃತ, ರಚನೆಗಳೆಂದೇ ಹೇಳಿದರೂ ತಪ್ಪಾಗದು.

ಈ ಕವಿಯ 'ಗದ್ಯ'ಗಳಲ್ಲಿ 'ಅಕ್ಷರಮಾಲಿಕಾಗದ್ಯ' ಒಂದು. ಇದು ಲಲಿತ ರಗಳೆಯ ರೂಪದಲ್ಲಿರುವ ರಚನೆ. ಅಕಾರದಿಂದ ಕ್ಷ ಕಾರದವರೆಗೆ ಇರುವುದರಿಂದ ಇದು ಅಕ್ಷರ ಮಾಲಿಕಾಗದ್ಯ ಆಯಿತಂತೆ!

ಅಕಾರಾದಿ ಕ್ಷಕಾರಾನ್ತಂ ಮಕಾರೋಥ್ಯಕ್ಷ ಮಾಲಿಕಾ
ಪ್ರಸಾದಿಸೋಮನಾಥಾಯ ಬಸವಸ್ಯ ಕೃಪಾನಿಧೇ ॥

ಅ ಕಾರದಿಂದ ಕ್ಷ ಕಾರದವರೆಗೆ (ಅಕ್ಷರ ಎಂದರೆ 'ಅ' ಯಿಂದ 'ಕ್ಷ'ವರೆಗೆ ಎಂಬ ತಪ್ಪುಕಲ್ಪನೆ ಸೋಮನಾಥನಿಗೂ ಇತ್ತೇನೋ !) ಅಕ್ಷರಗಳನ್ನು ಆದಿಯಲ್ಲಿಟ್ಟು: ಬರೆದ ಪಾದಗಳು ಈ ಕೃತಿಯಲ್ಲಿವೆ. 'ಹ' ಕಾರ ಆದಮೇಲೆ ಸಂಸ್ಕೃತದಲ್ಲಿಲ್ಲದ 'ಳ' ಕಾರಾದಿಯಾಗಿ ಒಂದು ಪಾದವನ್ನು ಕವಿ ರಚಿಸಿರುವುದರಿಂದ ಇದನ್ನು ಕನ್ನಡ ರಚನೆಯೆನ್ನ ಬಹುದೇನೋ!

ರತಿಪಮದ ನಿರ್ಹರಣ। ಲಸಿತ ಭಸಿತಾವರಣ
ವರದಲೀಲಾಶಕ್ತ। ಶಮಿತವಿಷಯೋದ್ರಿಕ್ತ
ಷಡ್ವರ್ಗ ನಿರ್ಮುಕ್ತ। ಸಹಜ ಜಂಗಮ ಭಕ್ತ
ಹರಣಗ ಸಿತವಕ್ತ್ರ। ಳಳಿತಕೀರ್ತಿ ಕಳತ್ರ
ಕ್ಷರವಿಮುಖ ನಿಜಗಾತ್ರ। ಅಕ್ಷರಸ್ತುತಿಪಾತ್ರ

'ಅಕ್ಷರಾಂಕಗದ್ಯ' ಎಂಬ ರಚನೆ ಚಂಪಕಮಾಲೆಗಳಲ್ಲಿದೆ. ಇದು ಬಹುಶಃ 'ಅಕ್ಷರಾಂಕಪದ್ಯ' ಆಗಿರಬೇಕು. ಏಕೆಂದರೆ ಪಿಡುಪರ್ತಿ ಸೋಮನಾಥನು ಈ ಕವಿಯ ರಚನೆಗಳನ್ನು ಕುರಿತು ಹೇಳುವಾಗ 'ಅಕ್ಷರಾಂಕಗದ್ಯಪದ್ಯ'ಗಳನ್ನು ಬರೆದಿರುವುದಾಗಿ ತಿಳಿಸಿದ್ದಾನೆ. ಈ ಕೃತಿಯಲ್ಲಿ ಪ್ರತಿಯೊಂದು ಚಂಪಕ ಮಾಲೆಯೂ ಅಕಾರಾದಿಯಾಗಿ ಕ್ಷ ಕಾರದವರೆಗೂ ಒಂದೊಂದು ಅಕ್ಷರದಿಂದ ಪ್ರಾರಂಭವಾಗುತ್ತದೆ. ಸಂಸ್ಕೃತದ ಸಂಪ್ರದಾಯಕ್ಕೆ ಭಿನ್ನವಾಗಿ ಪ್ರತಿಪದ್ಯದಲ್ಲಿಯೂ ಆದಿಪ್ರಾಸವಿದೆ.

'ನಮಸ್ಕಾರಗದ್ಯ' ಎಂಬುದು ಸೋಮನಾಥನ ಇನ್ನೊಂದು ರಚನೆ. ಇದರ ಒಂದು ಪಾದ 'ನಮೋ' ಎಂದು ಕೊನೆಗೊಂಡರೆ, ಇನ್ನೊಂದು ಪಾದ 'ನಮಃ' ಎಂದು ಕೊನೆಗೊಳ್ಳುತ್ತದೆ. ಮಂದಾನಿಲರಗಳೆಯಲ್ಲಿ ರಚಿತವಾದ ಈ ಕೃತಿ ಸ್ತುತಿರೂಪದಲ್ಲಿದೆ. ಬಸವೇಶ್ವರನ ವಿವಿಧ ಗುಣಕೀರ್ತನೆ ಇದರ ಉದ್ದೇಶ.

ತ್ರಿಗುಣಾತೀತ ಮನಸ್ಕಾಯ ನಮೋ
ನಿಗಮೋದ್ಧಾರ ವಚಸ್ಕಾಯ ನಮಃ
ಸುಗುಣೋತ್ಕರ ವಾಚಸ್ಕಾಯ ನಮೋ
ದಿಗದಿಗಸ್ತ ಯಶಸ್ಕಾಯ ನಮಃ
ಸಂಗತ ಭಸಿತೋರಸ್ಕಾಯ ನಮೋ
ಲಿಂಗವಿಲೀನ ಮನಸ್ಕಾಯ ನಮಃ...

ಮಂದಾನಿಲರಗಳೆಯಲ್ಲೇ ರಚಿತವಾದ ಇನ್ನೊಂದು ರಚನೆ 'ಅಷ್ಟೋತ್ತರ' ಶತನಾಮಗದ್ಯ! ಇದರ ಪ್ರತಿಪಾದಾಂತ್ಯದಲ್ಲಿ 'ನಮಸ್ತೇ' ಎಂದಿದೆ. ಪಿಡುಪರ್ತಿ ಸೋಮನಾಥಾದಿ ಕವಿಗಳು ಹೆಸರಿಸಿದ ರಚನೆಗಳಲ್ಲಿ 'ಪಂಚಪ್ರಕಾರಗದ್ಯ' ಒಂದು. ಶಬ್ದಾಲಂಕಾರಗಳಿಂದ ಕೂಡಿದ ಈ ರಚನೆ ಪಾಲ್ಕುರಿಕೆ ಸೋಮನಾಥನಿಗೆ ಸಂಸ್ಕೃತದ ಮೇಲಿರುವ ಪ್ರಭುತ್ವವನ್ನು ತಿಳಿಸುತ್ತದೆ.

ಅಖಿಳ ದನುಜ ಮನುಜ ದಿವಿಜೇಂದ್ರ ಫಣೀಂದ್ರ
ಗಣೇಂದ್ರ ಚಂದ್ರೋಪೇಂದ್ರ ವಾಣೀಂದ್ರ ಮುನೀಂದ್ರಾದಿ ಪಾಶು
ಪತಗಣ ಪ್ರಮಥಗಣ ಸಂಭಾವನೀಯ ಮಹನೀಯಗಣ್ಯ ಪುಣ್ಯ
ದೂರೀಕೃತ ತ್ರೈಗುಣ್ಯ ಸಕಲ ಮಾಹೇಶ್ವರಾಗ್ರಗಣ್ಯ ಚತು
ರ್ದಶ ಭುವನವರೇಣ್ಯ ದೇವ ಬಸವಾ ॥

ಇದುವರೆಗೆ ಹೇಳಿದ ಗದ್ಯಗಳ ಜೊತೆಗೆ ವಿದ್ವಾಂಸರ ಗಮನಕ್ಕೆ ಇದುವರೆಗೆ ಬರದ 'ಷಟ್ಸ್ಥಲ ಗದ್ಯ' ಎಂಬುದೊಂದಿದೆ. ಇದು ಮಂದಾನಿಲರಗಳೆಯಲ್ಲಿದೆ. 'ಭಕ್ತಂ' ಎಂದು ಪ್ರತಿ ಪಾದಾಂತ್ಯದಲ್ಲಿಯೂ ಇರುವ ಈ ರಚನೆಯ ಒಂದು ಭಾಗ:

ಶ್ರೀಮದನಾದಿ ವಿಮುಕ್ತಂ ಭಕ್ತಂ
ಪ್ರೇಮಕಳಾ ಸಂಯುಕ್ತಂ ಭಕ್ತಂ
ಉತ್ಸಾಹ ಗುಣಶಕ್ತಂ ಭಕ್ತಂ
ಕುತ್ಸಿತ ಕರ್ಮ ವಿವಿಕ್ತಂ ಭಕ್ತಂ
ಲೋಕಾಚಾರವಿರಕ್ತಂ ಭಕ್ತಂ...

ಸಾಹಿತ್ಯದಲ್ಲಿ ಸೋಮನಾಥನ ಸ್ಥಾನ

ಬಸವೇಶ್ವರನ ಬಗ್ಗೆ ಬರೆಯುವಾಗ ಸಾಹಿತ್ಯದಲ್ಲಿ ಮತ್ತು ಸಮಾಜದಲ್ಲಿ ಅವನ ಸ್ಥಾನವೇನೆಂಬುದನ್ನು ವಿವೇಚಿಸುವುದು ರೂಢಿ. ಆದರೆ ಪಾಲ್ಕುರಿಕೆ ಸೋಮನಾಥನನ್ನು ಕುರಿತು ಹೇಳುವಾಗ 'ಸಾಹಿತ್ಯದಲ್ಲಿ ಸೋಮನಾಥನ ಸ್ಥಾನ'ವನ್ನು ಮಾತ್ರ ಹೇಳಿದರೆ ಸಾಕು. ಏಕೆಂದರೆ ಸಾಮಾಜಿಕ ಕ್ರಾಂತಿಗಾಗಿ ಅವನು ಮಾಡಿದ್ದು ಗಣನೀಯವಲ್ಲ ಎಂದೆನಿಸುತ್ತದೆ. ಕರ್ನಾಟಕದಲ್ಲಿ ಬಸವೇಶ್ವರನಿಂದಾದ ಸಾಮಾಜಿಕ ಕ್ರಾಂತಿ ಅನೇಕ ಶತಮಾನಗಳ ಕಾಲ ಕನ್ನಡಿಗರ ಮೇಲೆ ಪ್ರಭಾವ ಬೀರಿತು. ಆದರೆ ಆಂಧ್ರದ ವಿಷಯ ಬೇರೆ. ಅಲ್ಲಿ ವೈದಿಕ ಅಭಿಮಾನವೇ ಹೆಚ್ಚು. ಬಸವೇಶ್ವರನನ್ನೂ

ಅವನ ಧಾರ್ಮಿಕ ಆಲೋಚನೆಗಳನ್ನೂ ಮೆಚ್ಚಿ ಕೀರ್ತಿಸಿದ ಪಂಡಿತಾರಾಧ್ಯನಾಗಲಿ, ಸೋಮನಾಥನಾಗಲಿ ತಮ್ಮ ಬ್ರಾಹ್ಮಣಧರ್ಮವನ್ನು ಪೂರ್ತಿಯಾಗಿ ಬಿಡಲು ತಯಾರಾಗಿರಲಿಲ್ಲ. ಹಾಗಿದ್ದರೂ ಸಾಹಿತ್ಯದಲ್ಲೂ ಸಮಾಜದಲ್ಲೂ ಅವರು ತುಂಬ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಸೋಮನಾಥನ 'ಬಸವಪುರಾಣ' ಅಪ್ರಮಾಣ, ಅವೈದಿಕ ಎಂದು ಧೂರ್ತ ವಿಪ್ರನೊಬ್ಬನು ತಿರಸ್ಕರಿಸಿ ಪ್ರತಾಪರುದ್ರನಿಗೆ ದೂರು ಹೇಳಿದ ವೃತ್ತಾಂತ ಸೋಮನಾಥನು ಕೈಕೊಂಡ ಸಾರಸ್ವತ ಸುಧಾರಣೆಗಳಿಗಿದ್ದ ಪ್ರತಿಭಟನೆಯನ್ನು ಸೂಚಿಸುತ್ತದೆ.

ಪಾಲ್ಕುರಿಕೆ ಸೋಮನಾಥನು ಹುಟ್ಟಿ ಬೆಳೆದ ಕಾಲ, ಸಾಹಿತ್ಯ ಪರಿಸರ, ಅವನ ಕೊಡುಗೆಗಳ ಬಗ್ಗೆ ಈಗ ವಿವೇಚಿಸಬಹುದು. ನನ್ನಯನೆಂಬ ಕವಿ ೧೧ನೆಯ ಶತಮಾನದಲ್ಲಿ ಆಂಧ್ರ ಮಹಾಭಾರತದ ರಚನೆಯನ್ನು ಪ್ರಾರಂಭಿಸಿದಾಗ ಅವನ ಆಶ್ರಯದಾತರಾದ ಪೂರ್ವ ಚಾಳುಕ್ಯರ ಒಲವು ವೈದಿಕ ಧರ್ಮದ ಕಡೆಗಿತ್ತು. ಜೈನ ಮುಂತಾದ ಅವೈದಿಕ ಧರ್ಮಗಳನ್ನು ಜನಮನಗಳಿಂದ ದೂರ ಮಾಡಿ, ವೈದಿಕ ಧರ್ಮವನ್ನು ಉದ್ಧರಿಸಬೇಕೆಂಬುದು ನನ್ನಯನ ಭಾರತ ರಚನೆಯ ಮುಖ್ಯೋದ್ದೇಶವಾಗಿತ್ತು. ಪಂಪ ಭಾರತವನ್ನು ನೋಡಿ, ಅದರ ಕಾವ್ಯ ಸಂಪ್ರದಾಯಗಳನ್ನೇ ಬಹುಮಟ್ಟಿಗೆ ಅನುಸರಿಸಿದ ನನ್ನಯ ಅಂತಸ್ಸತ್ವದಲ್ಲಿ ವ್ಯಾಸ ಮಹಾಭಾರತಕ್ಕೇ ಋಣಿಯಾಗಿದ್ದಾನೆ. ೧೧ನೆಯ ಶತಮಾನದಿಂದ ೨೦ನೆಯ ಶತಮಾನದವರೆಗಿನ ತೆಲುಗು ಕಾವ್ಯ ಪಂಥ ನನ್ನಯನ ಮಾರ್ಗವನ್ನೇ ಹಿಡಿಯಿತು. ಇದರಿಂದ ತೆಲುಗು ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವವೇನೋ ಉಳಿಯಿತು; ಆದರೆ ತೆಲುಗು ನುಡಿಯ ಬೆಳವಣಿಗೆ ಕುಂಠಿತವಾಯಿತು.

ಇಡೀ ತೆಲುಗು ಸಾಹಿತ್ಯದಲ್ಲಿ ಶಿವಕವಿಗಳದೇ ಒಂದು ಪ್ರತ್ಯೇಕ ಪಂಥ ತೆಲುಗು ಭಾಷಾಸಾಹಿತ್ಯಗಳನ್ನು ವಿವೇಚಿಸಿದ ವಿಮರ್ಶಕರು ಈ ಪ್ರತ್ಯೇಕ ಪಂಥವನ್ನು ಗುರುತಿಸಿದರಾದರೂ. ಅದರ ಮಹತ್ವವನ್ನು ವಿಶ್ಲೇಷಿಸಲಿಲ್ಲ. ಸೋಮನಾಥನ 'ಜಾನುತೆನುಗು' ತತ್ವಕ್ಕೆ ಮನ್ನಣೆ ದೊರಕಿದ್ದರೆ, ತೆಲುಗು ಸಾಹಿತ್ಯ ಸತ್ವಪೂರ್ಣವಾಗಿ. ಸ್ವಂತಿಕೆಯಿಂದ ಬೆಳೆದು ಇಡೀ ಭಾರತದಲ್ಲೇ ಗಣನೀಯಸ್ಥಾನ ಪಡೆಯುತ್ತಿತ್ತು. ಈ ನಿಟ್ಟಿನಲ್ಲಿ ಸೋಮಣ್ಣನ ದಿಟ್ಟ ಪ್ರಯತ್ನವನ್ನು ಯಾರಾದರೂ ಮೆಚ್ಚಲೇಬೇಕು.

ತೆಲುಗಿನ ಶಿವಕವಿಗಳಲ್ಲಿ ಮೊದಲನೆಯವನು ಮಲ್ಲಿಕಾರ್ಜುನ ಪಂಡಿತಾರಾಧ್ಯ. ಇವನ 'ಶಿವತತ್ತ್ವಸಾರಮು' ಶೈವಧರ್ಮದ ಕೈಪಿಡಿ. ಅವನ ಕಾವ್ಯನಿರ್ಮಾಣ ಶಕ್ತಿಯ ವಿಷಯ ಹೇಗಿದ್ದರೂ. ಪಾಲ್ಕುರಿಕೆ ಸೋಮನಾಥನ 'ಪಂಡಿತಾರಾಧ್ಯ ಚರಿತ್ರ'ದಿಂದ ಮಲ್ಲಿಕಾರ್ಜುನನ ಭವ್ಯ ವ್ಯಕ್ತಿತ್ವ ಲೋಕದಲ್ಲಿ ಪ್ರಖ್ಯಾತವಾಯಿತು. ಪಂಡಿತಯ್ಯನದು 'ಸಮನ್ವಯ' ಸಿದ್ಧಾಂತ. ಆಜನ್ಮಸಿದ್ಧವಾಗಿ ಬಂದ ವೈದಿಕಾಚಾರಗಳನ್ನು ಬಿಟ್ಟುಕೊಡಲು ಪಂಡಿತಾರಾಧ್ಯನು ತಯಾರಾಗಿರಲಿಲ್ಲ. ಬಸವೇಶ್ವರನನ್ನು ನೋಡಬೇಕೆಂಬ ಅವನ ಬಯಕೆಯೇನಾದರೂ ಈಡೇರಿದ್ದರೆ, ಪಂಡಿತಾರಾಧ್ಯನೂ ವೀರಶೈವ ಧರ್ಮದ ಪೂರ್ಣ ಪ್ರವಾದಿಯಾಗುತ್ತಿದ್ದನೇನೋ! 'ಬಸವಪುರಾಣ'ವನ್ನು ಬರೆದ ಅನಂತರವೇ ಸೋಮನಾಥನು 'ಪಂಡಿತಾರಾಧ್ಯ ಚರಿತ್ರ'ವನ್ನು ಬರೆದಿರುವುದನ್ನು ನೋಡಿದರೆ, ಬಹುಶಃ ಬಸವಣ್ಣನ ಮೇಲಿನ ಭಕ್ತಿ-ಪಂಡಿತಯ್ಯನ ಸಂಬಂಧ ಅವನನ್ನು ಇಬ್ಬಂದಿಯಲ್ಲಿರಿಸಿದವೆಂದು ಕಾಣುತ್ತದೆ.

ಪಂಡಿತಾರಾಧ್ಯನಿಗೂ ಪಾಲ್ಕುರಿಕೆ ಸೋಮನಾಥನಿಗೂ ನಡುವೆ ನನ್ನೆಚೋಡನೆಂಬ ಶೈವಕವಿ ಇದ್ದನು. ಅರಸನಾಗಿದ್ದ ಈ ಕವಿ

ವಸ್ತುಕದಿಂದ ತನ್ನ ಶಕ್ತಿಯನ್ನು ಪ್ರಕಟಪಡಿಸಲು ಹೊರಟಿದ್ದ. 'ಕುಮಾರಸಂಭವವು' ಎಂಬ ಅವನ ಕೃತಿ ಪಂಪ, ರನ್ನ ಮುಂತಾದವರ ಕಾವ್ಯಸಂಪ್ರದಾಯಗಳನ್ನೇ ಹೆಚ್ಚಿಗೆ ತೋರುತ್ತದೆ. ಮಾರ್ಗ-ದೇಶಿಗಳ ಸಮ್ಮಿಲನವೆಂದು ತನ್ನ ಕಾವ್ಯವನ್ನು ಕುರಿತು ನನ್ನೆಚೋಡನು ಹೇಳಿಕೊಂಡಿದ್ದರೂ. ಅವನ ಕಾವ್ಯದಲ್ಲಿ ಶಿಷ್ಟಮಾರ್ಗವೇ ಹೆಚ್ಚಾಗಿ ಕಾಣಿಸುತ್ತದೆ.

ಸೋಮನಾಥ ಕಾವ್ಯರಚನೆಮಾಡಲು ಹೊರಟಕಾಲ ದಕ್ಷಿಣ ಭಾರತದಲ್ಲಿ ಸಾಮಾಜಿಕವಾಗಿಯೂ, ಸಾಹಿತ್ಯಕವಾಗಿಯೂ ಸಂಕ್ರಮಣಕಾಲವೆನ್ನಬಹುದು. ತಮಿಳುನಾಡಿನಲ್ಲಿ ನಾಯನ್ಮಾರರು, ಆಳ್ವಾರರು ಭಕ್ತಿಪಂಥವನ್ನು ಪ್ರಚಾರಕ್ಕೆ ತಂದರು. ಅರವತ್ತುಮೂವರು ನಾಯನ್ಮಾರರೂ ಸೇರಿದಂತೆ ಅನೇಕ ಶೈವಪುರಾತನರ ಕಥೆಗಳನ್ನು ಸ್ವೀಕರಿಸಿ ಶೇಕ್ಕಿಳಾರ್ 'ಪೆರಿಯಪುರಾಣ'ವನ್ನು ರಚಿಸಿದ. ಇನ್ನೊಂದು ಕಡೆ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತದಿಂದ ವೈಷ್ಣವರಲ್ಲೂ ಭಕ್ತಿ ಬಲಿಯುತ್ತಿತ್ತು. ಶೈವ ವೈಷ್ಣವ ಪಂಥಗಳ ನಡುವೆ ಜಗಳವೂ ಆರಂಭವಾಯಿತು. ಕರ್ನಾಟಕದಲ್ಲಿ ಬಸವಣ್ಣ ವೀರಶೈವಧರ್ಮ ಸಂಚಾಲಕನಾಗಿ ಸಾಮಾಜಿಕ ಕ್ರಾಂತಿಯನ್ನು ತಂದಿದ್ದನು. ಸಾಹಿತ್ಯದಲ್ಲೂ ವೀರಶೈವಪಂಥ ಬಹಳಷ್ಟು ಬದಲಾವಣೆಗಳನ್ನು ತಂದಿತ್ತು. ಲೇಖಕ ಲೇಖಕಿಯರ ಕೈಯಿಂದ ಹರಿದ ವಚನ ಸಾಹಿತ್ಯ ಸ್ರವಂತಿ ಸಹೃದಯರನ್ನು ಭಕ್ತಿಯಲ್ಲಿ ಮುಳುಗಿಸಿತು. ಕಾವ್ಯರಚನೆಯಲ್ಲಿ ಅನೇಕ ಪ್ರಯೋಗಗಳು ನಡೆದುವು, ಭಾಷೆಯಲ್ಲಿ ಹಲವು ಬದಲಾವಣೆಗಳು ಕಾಣಿಸಿಕೊಂಡವು. ಇನ್ನೊಂದು ಕಡೆ ಹರಿಹರ ರಗಳೆಗಳಲ್ಲಿ ಭಕ್ತರ ಜೀವನವನ್ನು ಸತ್ವಯುತವಾಗಿ ವರ್ಣಿಸಿದನು. ಅದೂ ಸಾಲದಂತೆ 'ಗಿರಿಜಾಕಲ್ಯಾಣ'ದಿಂದ ತಾನೂ ಮಹಾಕವಿ ಎನಿಸಿಕೊಂಡನು.

ನೆರೆಹೊರೆಯ ರಾಜ್ಯಗಳಿಗೆ ಹೋಲಿಸಿದಾಗ ಆಂಧ್ರದಲ್ಲಿ ಸಮಾಜದ ಸ್ಥಿತಿಗತಿ ಪ್ರಶಾಂತವಾಗಿಯೇ ಇತ್ತೆಂದು ಕಾಣುತ್ತದೆ. ಜೈನರು ಕೆಲವು ಶತಮಾನಗಳ ಹಿಂದೆಯೇ ವೈಭವವನ್ನು ಕಳೆದುಕೊಂಡರು. ವೀರಶೈವ, ವೀರವೈಷ್ಣವ ಪಂಥದ ಕೆಲವರು ಮಾತ್ರ ಜಗಳದಲ್ಲಿ ತೊಡಗಿ ಪ್ರಶಾಂತಚಿತ್ತರಿಗೆ ತಲೆನೋವನ್ನು ತರಿಸುತ್ತಿದ್ದರು. ಹರಿಹರರ ಭಕ್ತರ ನಡುವಿನ ಘರ್ಷಣೆಯನ್ನು ನೋಡಿದ ಮಹಾಕವಿ ತಿಕ್ಕನ ಹರಿಹರ ಅದ್ವೈತವೆಂಬ ಹೊಸ ಪಂಥವನ್ನು ತನ್ನ ಮಹಾಭಾರತದಲ್ಲಿ ಪ್ರತಿಪಾದಿಸಿದನು.

ಈ ಹಿನ್ನೆಲೆಯಲ್ಲಿ ಪಾಲ್ಕುರಿಕೆ ಸೋಮನಾಥನ ಕಾವ್ಯಗಳನ್ನು ಪರಿಶೀಲಿಸಬೇಕಾದ ಅವಶ್ಯಕತೆಯಿದೆ. ಶೈವಧರ್ಮಕ್ಕೆ ಅಂಟಿಕೊಳ್ಳದೆ ಲೌಕಿಕ ಕಾವ್ಯಗಳಲ್ಲಿ ತನ್ನ ಪ್ರಯೋಗಗಳನ್ನು ಮಾಡಿದ್ದರೆ ಸೋಮನಾಥನು ತೆಲುಗು ಸಾಹಿತ್ಯದ ಸ್ಥಿತಿಗತಿಗಳನ್ನೇ ಬದಲಾಯಿಸುತ್ತಿದ್ದನೇನೋ ಎನಿಸುತ್ತದೆ. ಧಾರ್ಮಿಕ ಸಂಪ್ರದಾಯಗಳ ಸಂಕೋಲೆಗಳಿಗೆ ಕಟ್ಟುಬಿದ್ದ ಕಾರಣ, ಈ ಕವಿಯ ಸ್ವತಂತ್ರ ಚಿತ್ತವೃತ್ತಿಗೆ ತಕ್ಕ ಬೆಲೆ ಲಭಿಸಲಿಲ್ಲ. ಆದರೂ ತೆಲುಗು ಸಾಹಿತ್ಯಕ್ಕೆ ಅವನು ನೀಡಿದ ಕೊಡುಗೆಯನ್ನು ಅಲ್ಲಗಳೆಯುವಂತಹುದಲ್ಲ.

ವಸ್ತು, ಛಂದಸ್ಸು, ಭಾಷೆ—ಇವು ಕಾವ್ಯ ಪಂಥವನ್ನು ನಿರ್ದೇಶಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಮೂರರಲ್ಲೂ ಸ್ವಾತಂತ್ರ್ಯವನ್ನು ತೋರಿಸಿದ ಪ್ರಯೋಗಶೀಲ ಕವಿ ಸೋಮನಾಥ. ಕರ್ನಾಟಕದ ಬಸವೇಶ್ವರನನ್ನು ಆಂಧ್ರದ ಪಂಡಿತಾರಾಧ್ಯನನ್ನೂ ಕಾವ್ಯನಾಯಕರನ್ನಾಗಿ ಮಾಡಿದ್ದು ಸೋಮನಾಥನ ಮೊದಲ ಸಾಹಸ. ಈ ಮಹಾನ್ ವ್ಯಕ್ತಿಗಳ ಜೀವನದೊಂದಿಗೆ, ಅನೇಕ ಶೈವ ಪುರಾತನರ ಜೀವನದ ಸ್ವಾರಸ್ಯಕರ ಘಟನೆಗಳನ್ನೂ ಭಕ್ತ್ಯಾವೇಶಗಳಿಂದ ಕವಿ ನಿರೂಪಿಸಿದ್ದಾನೆ. ಛಂದಸ್ಸಿನ ವಿಷಯ

ದಲ್ಲಿ ಈತನ ಕೊಡುಗೆಯನ್ನು ಯಾವ ಸಾಹಿತ್ಯ ವಿಮರ್ಶಕನೂ ಮರೆಯುವಂತಿಲ್ಲ. ಜನಪದಗೀತೆಗಳಲ್ಲಿ, ಲಾವಣಿಗಳಲ್ಲಿ ಹೇರಳ ವಾಗಿ ಬಳಸಲಾಗುತ್ತಿದ್ದ ದ್ವಿಪದಿ ಛಂದಸ್ಸನ್ನು ಮಹಾಕಾವ್ಯರಚನೆಗೆ ಬಳಸಿದ್ದು ಈ ಕವಿಯು ದಿಟ್ಟ ಹೆಜ್ಜೆ. ದ್ವಿಪದಿ ಇಂಗ್ಲಿಷಿನ 'ಬ್ಲ್ಯಾಂಕ್‌ವರ್ಸ್'ನ್ನು ಹೋಲುತ್ತದೆ. ತೆಲುಗಿನ ಅನೇಕ ವೀರ ಗೀತೆಗಳು ಈ ಛಂದಸ್ಸಿನಲ್ಲಿರುವುದನ್ನು ಕಂಡ ಸೋಮನಾಥ ತನ್ನ ತತ್ತ್ವಗಳ ವ್ಯಾಪ್ತಿಗೆ ಈ ವೀರ ಛಂದಸ್ಸೇ ಸರಿಯಾದುದೆಂದು ಭಾವಿಸಿರಬೇಕು. ಜೀವನ ಚರಿತ್ರೆ, ವ್ಯಕ್ತಿಯ ಗುಣಗಾನ, ರಗಳೆ, ಉದಾಹರಣ, ಮಹಾಭಾಷ್ಯ, ಶತಕ, ಅಷ್ಟಕ, ಗದ್ಯ—ಹೀಗೆ ಈತನ ರಚನೆಗಳ ವೈವಿಧ್ಯ ಗಮನಾರ್ಹವಾದುದು.

ಭಾಷೆಯ ವಿಷಯದಲ್ಲಿ ಪಾಲ್ಕುರಿಕೆ ಸೋಮನಾಥ ತನ್ನ ಆದರ್ಶಕ್ಕೆ ತಕ್ಕಂತೆ ನಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಸಂಸ್ಕೃತ ಪಾಂಡಿತ್ಯದ ಹಿಡಿತಕ್ಕೆ ಸಿಕ್ಕಿದವರು ಅದರ ಮುಷ್ಟಿಯಿಂದ ಬಿಡಿಸಿ ಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಇದೇನಿದ್ದರೂ ಜಾಣತನದ ಅಚ್ಚ ತೆಲುಗನ್ನು ವೇದದಂತೆ ನೋಡಬೇಕೆಂಬ ಸೋಮನಾಥನ ಆದರ್ಶವನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳಬೇಕು. ದೇಶ ಭಾಷೆಗಳ ಅಭಿವೃದ್ಧಿಗೆ ಅವನ ನುಡಿ ಜಾಣ್ನುಡಿ, ಪವಿತ್ರ ವಾದ ನುಡಿ:

ಉರುತರ ಗದ್ಯ ಪದ್ಯಗಳಿಗಿಂತ
ಸರಸವಾದುದು ಜಾಣ ತೆಲುಗು
ತೆಲುಗು ಮಾತುಗಳೆನ್ನಬೇಡಿ
ವೇದಗಳಿಗೆ ಸಮಾನವಾಗಿ ನೋಡಿ

ಕೆ.ಸಂ ೨೪೩೮೩—ವಿವಿಮು—೫,೦೦೦ ಪ್ರತಿಗಳು—೧೮–೧೦–೮೩

ಕೆಲವು ಸಾಹಿತ್ಯ ಕೃತಿಗಳು

ಬೆಲೆ: ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯಿ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ
ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣ ಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎಸ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ